Registered No. M. 1393 ಕಾಲಾಣೆ ಪುಟ ೬ 10(6) Box no. 79/4

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯೪೨ನೇ ಇಸವಿ ಜನವರಿ ತಾರೀಕು ೯ನೇ ಶುಕ್ರವಾರ | ಸಂಚಿಕೆ ೮೧
VOL. XXIII | MANGALORE, FRIDAY, JANUARY 9, 1942 | NO. 81

ಬ್ರಿಟನಿನ ಕರ್ತವ್ಯ

ಸರ್ ತೇಜ್ ಬಹದೂರ್ ಸಪ್ರೂ ಗಳು ಇನ್ನಿತರ ಕೆಲ ಆಢ್ಯ ಲಿಬರಲರೊಂದಿಗೆ ಮಿ। ಚರ್ಚ್‌ಹಿಲ್ಲರಿಗೊಂದು ವಿನಂತಿಯನ್ನು ಒಂದು ಕೇಬ್ಲ್‌ನ ಮೂಲಕ ಈಚಿಗೆ ಮಾಡಿಕೊಂಡಿದ್ದಾರೆ. ಅದರಲ್ಲಿ ಅವರು,—

"ಇಂಡಿಯವು ಇನ್ನು ಮುಂದೆ ವ್ಯಾಟ್ ಹಾಲ್‌ನಿಂದ ಆಳಲ್ಪಡುವ ಒಂದು ಅಧೀನ ರಾಷ್ಟ್ರವಾಗಿರದೆ, ಬ್ರಿಟಿಷ್ ಕಾಮನ್‌ವೆಲ್ತಿನ ಇತರ ರಾಷ್ಟ್ರ ಗಳಿಗೆ ಸಮಾನವಾಗಿರುವ ಅಧಿಕಾರ ವನ್ನೂ, ರಾಜ್ಯಾಂಗದ ಸ್ಥಾನಮಾನ ವನ್ನೂ ಪಡೆಯುವಂತೆ ಏರ್ಪಡಿಸಲು ಸಾಧ್ಯವಿಲ್ಲವೇ? ಅಂಥದೊಂದು ಪ್ರಕ ಟಣೆ ಮಾತ್ರವೇ ಅಲ್ಲ; ಯುದ್ಧಕ್ಕೆ ಸಹ ಕಾರವನ್ನು ನೀಡುವಲ್ಲಿ, ತಮ್ಮ ಸ್ವಾತಂ ತ್ರ್ಯದ ಹಿತಾಸಕ್ತಿಯನ್ನೂ ರಕ್ಷಿಸಿಕೊಂ ಡಂತಾಗುತ್ತದೆಂಬ ಈ ಒಂದು ಅಂಶವೂ ಜನಗಳ ಮೇಲೆ ಪರಿಣಾಮವನ್ನು ಉಂಟು ಮಾಡುವ ಹಾಗೆ ಇತರ ಕೆಲ ಏರ್ಪಾ ಡುಗಳೂ ಅಗತ್ಯವಾಗಿಯೂ ನಡೆಯಲೇ ಬೇಕಾಗಿದೆ" ಎಂದಿದ್ದಾರೆ.

ಶ್ರೀ। ಸಿ. ರಾಜಗೋಪಾಲಾಚಾರಿಯವರೂ ಮದ್ರಾಸ್ ರಾಜಕೀಯ ಕಾನ್ಫರೆನ್ಸನ್ನು ಉದ್ದೇಶಿಸಿ ಆಡಿರುವ ನುಡಿಗಳ ಒಟ್ಟು ಸಾರಾಂಶವಾದರೂ ಅಷ್ಟೇ. ಆದರೆ, ಇಂಡಿಯವು ತನ್ನ ರಕ್ಷ ಣೆಗಾಗಿ ತಕ್ಕ ಸನ್ನಾಹಗಳನ್ನು ತಾನೇ ಮಾಡಿಕೊಳ್ಳುವಂತಾಗಬೇಕೆಂದು ಪದೇ ಪದೇ ಕೇಳಿಕೊಂಡ ಈ ಕೇಳಿಕೆಗಳಿಗೆ ಉತ್ತರವಾಗಿ, ಬ್ರಿಟನ್ ತನ್ನ ನೌಕಾ ಬಲವೇ ಭಾರತದ ಆಪದ್ಬಾಂಧವನೆಂಬಂತೆ ಧೈರ್ಯ ಹೇಳಿದೆ. ಇತ್ತೀಚೆಗೆ ಪೂರ್ವ ದೇಶಗಳಲ್ಲಿ ಈಚಿಗೆ ಅತಿ ವೇಗದಿಂದ ಚಲಿಸಿರುವ ಕೆಲವೊಂದು ಘಟನೆಗಳಿಂದ, ಇಂಡಿಯವು ತನ್ನ ರಕ್ಷಣೆಗಾಗಿ ಸ್ವಸಹಾ ಯದ ಮೇಲೆ ಹೊಂದಿಕೊಂಡಿರುವುದೇ ಕ್ಷೇಮವೆಂದು ವೇದ್ಯವಾಗುತ್ತಿದೆ. ಶ್ರೀ। ರಾಜಗೋಪಾಲಾಚಾರಿಯವರು ಆಡಿ ದಂತೆ, "ಈ ದೇಶದ ರಕ್ಷಣೆಯು, ಭಾರ ತೀಯರ ದೇಶವಾತ್ಸಲ್ಯದ ಹೊರತಾದ ಇತರ ಕಾರ್ಯಗಳಲ್ಲಿ ಅಡಗಿದೆ ಎಂದು ಭಾವಿಸಿರುವುದೇ ಒಂದು ದೊಡ್ಡ ಪ್ರಮಾದವಾಗಿದೆ." ಅಲ್ಲವೆನಿಸಲಾದೀತೇ?

ಈ ಸಂದರ್ಭದಲ್ಲಿ ನಾವು ಬಾರ್ದೋಲಿಯ ತೀರ್ಮಾನವನ್ನು ಎದುರಿಗೆ ಹಿಡಿಯದಿರಲಾಗುವುದಿಲ್ಲ. ಅದರ ಉಪಯೋಗ ಮಾಡಿಕೊಂಡು ಬ್ರಿಟನಿನವರು ಇಂಡಿಯಕ್ಕೆ ಸ್ವಾತಂತ್ರ್ಯ ಕೊಡುವೆವೆಂದು ಖಚಿತಪಡಿಸಲು ಇದೇ ಈಗ ಸುಸಮಯ!

ಸ್ವಾತಂತ್ರ್ಯದಾನದ ಈ ವಿಷಯದಲ್ಲಿ ಇನ್ನೊಂದು ತರ್ಕವಿದೆ. ಡಾ। ಎಡ್ವರ್ಡ್ ತಾಮ್ಸನ್‌ರಂಥ ಪ್ರಾಜ್ಞರು ಅನ್ನುವಂತೆ,- ತನ್ನ ಸ್ವಾತಂತ್ರ್ಯಕ್ಕಾಗಿ ಇಂಡಿಯವು ಬ್ರಿಟನಿನ ಕಡೆಗೆ ನೋಡಬೇಕಾಗಿಲ್ಲ; ಇಂಡಿಯವು ಯುದ್ಧಪ್ರಯತ್ನಗಳಲ್ಲಿ ಸಹ ಕರಿಸಿದರೆ, ಅದು ಸಂಪೂರ್ಣ ಸ್ವಾತಂ ತ್ರ್ಯದ ದೇಶವಾಗಿ ಮಾರ್ಪಡುವಲ್ಲಿ ಯಾವ ಸಂದೇಹವೂ ಇಲ್ಲ; ಆಗ ಹಾಗೆ ಆ ಸ್ವಾತಂತ್ರ್ಯವನ್ನು ತಡೆಯಲು ಯಾರಿಗೂ ಶಕ್ತಿ ಇಲ್ಲ ಎಂದಿದ್ದಾರೆ. ಆದರೆ ಇದಕ್ಕೆ ಉತ್ತರವಾಗಿ, ಪಂಡಿತ ನೆಹರುಗಳು ಏನು ಹೇಳಿರುವರು ಬಲ್ಲಿರಾ? "ಈ ಮಾತುಗಳೇನೋ ಧೈರ್ಯ ಸೂಚಕಗಳಾದರೂ, ಇದರ ಸರಿಯಾದ ಅರ್ಥವಾಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ, ಅಧಿಕಾರಯುತವಾದ ಒಂದು ಸರಕಾರದಿಂದ, ಕೈಕಾಲು ಕಟ್ಟಿಹಾಕಿ ದಂತಿರುವ ಒಂದು ದೇಶ, ಡಾ। ಎಡ್ವರ್ಡರು ಹಾರೈಸುವಂತೆ, ಮೇಲಕ್ಕೇರುವುದು ಕಷ್ಟಸಾಧ್ಯ. ಅಂಥ ದೇಶವು ಮಾಡುವ ಪ್ರತಿಯೊಂದು ಪ್ರಯತ್ನದಿಂದ, ಅದಕ್ಕೆ ಸರಕಾರದೊಡನೆ ಜಗಳವೇ ಗಂಟು ಬೀಳುತ್ತಿದೆ. ಆ ದೇಶವು ಸರಿಯಾಗಿ ಕೆಲಸ ಮಾಡಬೇಕಾದರೆ, ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಅಗತ್ಯ" ಎಂದಿದ್ದಾರೆ.

ಯಾವ ದೃಷ್ಟಿಯಿಂದ ನೋಡಿದರೂ, ಇಂಡಿಯಕ್ಕೆ ಸ್ವಾತಂತ್ರ್ಯ ಬೇಕಾಗಿದೆ. ಅದಿಲ್ಲದೆ ಯಾವ ಕೆಲಸವೂ ಸಾಧ್ಯವಾಗದು. ಆದರೆ ಬ್ರಿಟಿಷ್ ಸರಕಾರವು ಅದನ್ನು ಕೊಡುವ ಲಕ್ಷಣ ತೋರಲಿಲ್ಲ! ಈ ದೇಶದಲ್ಲಿನ ಒಳ ಭೇದಗಳಿಂದ ಅದನ್ನು ಕೊಡಲಾರೆವೆಂದು ಅವರ ನೆವನ. ಈ ನೆವನವು ಬಹಳ ಹಳೆಯದು, ಅದರ ಬೆಲೆ ತಗ್ಗಿದೆ ಎಂಬುದು ಅವರಿಗಿನ್ನೂ ಮನವರಿಕೆಯಾಗಿಲ್ಲ. ಫ್ರಾನ್ಸ್ ತನ್ನ ಪತನದ ಕಾಲದಲ್ಲಿ ತನ್ನ ಒಗ್ಗಟ್ಟಿನ ಮಧುರವಾದ ಚಿತ್ರವನ್ನು ಲೋಕಕ್ಕೆ ಪ್ರದರ್ಶಿಸಲಿಲ್ಲವಾದರೂ, ಆ ದೇಶ ದೊಡನೆಯೂ ಇಂಗ್ಲೆಂಡು ರಾಜಕೀಯ ದೃಷ್ಟಿಯಿಂದ ಒಂದಾಗಲು ಅಡ್ಡಿ ಇಲ್ಲ ವೆಂದು ಸೂಚಿಸಲು ಮಿ। ಚರ್ಚ್‌ಹಿಲ್ಲರು ಹಿಂಜರಿಯಲಿಲ್ಲ. ಅಂತೇ, ಇಂಡಿಯವು ತನ್ನ ಸರ್ವ ಶಕ್ತಿಸಂಪತ್ತುಗಳೊಡನೆ ಡೆಮೊಕ್ರೆಸಿಗಳೊಡನೆ ಬೆರೆಯಬೇಕಾದರೆ, ರಾಜಕೀಯ ದೃಷ್ಟಿಯಿಂದ ಅದನ್ನು ಒಂದುಗೂಡಿಸದೆ ವಿಧಿ ಇಲ್ಲ. ಇದಕ್ಕೆ ಬ್ರಿಟನ್ ಒಪ್ಪದಿದ್ದರೆ ಅದರ ಅರ್ಥವೇ ನೆಂಬುದು ಸ್ಪಷ್ಟವೇ ಇದೆ!

ಮೊಡವೆ ಮತ್ತು ಪದ್ದುಗಳಿಂದ ತೊಂದರೆ ಪಡುತ್ತಿದ್ದಳು

ಆರು ವಾರಗಳ ಕ್ರುಶ್ಮನ್ ಸೇವನಾನಂತರ ಅಂಗಕಾಂತಿ ದೋಷಹೀನವಾಯಿತು.

ಈ ಹೆಂಗಸು ಮೊಡವೆ ಮತ್ತು ಚಿಬ್ಬು ಮೊದಲಾದ ಚರ್ಮರೋಗಗಳಿಂದ ಬಹಳ ತೊಂದರೆ ಪಡುತ್ತಿದ್ದಳು. ಇವುಗಳ ಪೀಡೆ ನೀಗಿಸಲು, ಅವಳು ಸಹಜವಾಗಿ, ಯಾವತ್ತೂ ಚಿಕಿತ್ಸೆ ನಡಿಸಿದಳು; ಕೊನೆಗೆ ಗೊತ್ತು ಹಚ್ಚಿಕೊಂಡ ಚಿಕಿತ್ಸೆಯಿಂದ, ಅವಳ ಅಂಗಕಾಂತಿಯು ಪುನಃ ದೋಷರಹಿತವಾಯಿತು. ಅವಳು ಬರೆಯುವುದು ಹೀಗಿದೆ:

"ಕಳೆದ ಎರಡು ವರ್ಷಗಳಿಂದ, ನನ್ನ ಮುಖವು ಗಟ್ಟಿ ಮೊಡವೆ ಮತ್ತು ಕೆಂಪೆ ಮುಚ್ಚಿಗಳಿಂದ ತುಂಬಿ ಹೋಗಿತ್ತು; ಹಾಗೂ ಕುತ್ತಿಗೆ ಮತ್ತು ಮುಂತೋಳುಗಳಲ್ಲಿ ದದ್ದು ಬಾಧೆ ಸಿಗಬಹುದಾದ ಯಾವತ್ತೂ ಮುಲಾಂ, ಔಷಧಿನೀರು ಮೊದಲಾದುವುಗಳನ್ನೆಲ್ಲಾ ಏನೂ ಪ್ರಯೋಜನವಿಲ್ಲದೆ ಉಪಯೋಗಿಸಿ ಪ್ರಯತ್ನಿಸಿದೆನಾನು ಬಹಳ ಸಂಕಟಪಡುತ್ತಿದ್ದೆ. ದೈವವಶಾತ್, ನಾನು ಕ್ರುಶ್ಮನ್ ಸೇವಿಸಬೇಕೆಂದು ನಿಶ್ಚಯಿಸಿದೆ: ಇದರಿಂದ ಆರು ವಾರಗಳೊಳಗೆ ನನ್ನ ಮುಖದ ಕಲೆಗಳು ಮಾಯವಾದುವು; ಮತ್ತು ದದ್ದಿನ ಕುರುಹೇ ಅಂದಿನಿಂದ ಕಾಣಿಸಿಕೊಳ್ಳಲಿಲ್ಲವೆಂದರೆ ಅತ್ಯುಕ್ತಿಯಾಗಲಾರದು. ಪ್ರತಿ ಪ್ರಾತಃಕಾಲವೂ ನಾನು ಕ್ರಮವಾಗಿ ಕ್ರುಶ್ಮನ್ ಸೇವಿಸುತ್ತಿದ್ದೇನೆ; ಇದು ಇಲ್ಲದೆ ಇರಲು ಮನಸ್ಸೊಪ್ಪದು" —(ಮಿಸೆಸ್) ಜೆ. ಎ.

ದೇಹಾಂಗಗಳು ಸರಿಯಾಗಿ ಕೆಲಸಮಾಡದೆ, ರಕ್ತ ಮಲಿನತೆಯಿಂದುಂಟಾಗುವ ತುರಿಕೆಯು ನಂಜಿನಿಂದ ಅತಿಯಾಗಿ ಮೊಡವೆ ಮತ್ತು ಗಜ್ಜು ಉಂಟಾಗುತ್ತಿರುವುದು. ಕ್ರುಶ್ಮನ್ ಸಾಲ್ಟ್‌ನ

ದೇಹಾಂಗಗಳು ಸರಿಯಾಗಿ ಆರೋಗ್ಯವಾಗಿ ಕೆಲಸ ಮಾಡುವಂತೆ ಮಾಡಿ, ರಕ್ತ ಮಲಿನತೆಯು ಕ್ರಮವಾಗಿ ಮತ್ತು ಪೂರ್ಣವಾಗಿ ದೇಹದಿಂದ ಹೊರಹೋಗುವಂತೆ ಮಾಡುತ್ತದೆ.

ದೇಶೀಯ ವಸ್ತುಗಳನ್ನೇ ಕೊಂಡುಕೊಳ್ಳಿ—ಇವನ್ನೇ

ಕೊಳ್ಳಲು ಮನಸ್ಸು ಮಾಡಿರಿ.
(ಟ್ರೇಡ್ ಮಾರ್ಕ್ ರಿಜಿಸ್ಟರ್ಡ್ ಮಾಡಲ್ಪಟ್ಟಿದೆ)
ಇವನ್ನು ಮಕ್ಕಳು ಬಹಳವಾಗಿ ಮೆಚ್ಚುತ್ತವೆ.
ಉತ್ತಮ ಗುಣದ್ದು
ಸುಂದರ ಹಸ್ತ ಕೌಶಲ್ಯದ್ದು!
ಎಲ್ಲೆಲ್ಲೂ ಮಾರಾಟಕ್ಕಿದೆ.

ಏಜನ್ಸಿ ಪತ್ರಗಳಿಗೂ, ಮಾಲು ತರಿಸುವ ಬಗ್ಗೂ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ನಮ್ಮ ಸೋಲ್ ಡಿಸ್ಟ್ರಿಬ್ಯೂಟರ್‌ರಿಗೆ ಬರಕೊಳ್ಳಿ.

Mr. A. K Kader Kutty, M.L.A.
Caltex Agent, TELLICHERRY.
PREMIER TRADERS,
11/12, First Line Beach, Madras.

ಅನ್ನಾಹಾರವನ್ನು ತಿನ್ನುವುದೇ ಬಹುಕಷ್ಟವಾಗಿದ್ದಿತು.
ಬಲಹೀನತೆಯಿಂದಲೂ ಮತ್ತು ಅಜೀರ್ಣತೆಯಿಂದಲೂ ಜೀವನವೇ ನಾಶವಾಗಿತ್ತು.
ಯಾವುದನ್ನಾದರೂ ಇಲ್ಲದಿರಬಲ್ಲೆ; ಆದರೆ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲೆಟ್ಸ್‌ಯಿಲ್ಲದೆ ಮಾತ್ರ ಎಂದಿಗೂ ಇರಲಾರೆ.

IRVING'S
Yeast-Vite
TONIC TABLETS

ಮಹಾಶಯರೇ, ಅದ್ಭುತ ಮಹಿಮೆಯುಳ್ಳ ಯೀಸ್ಟ್-ವೈಟ್ ಟೇಬ್ಲೆಟ್ಟುಗಳನ್ನು ಕುರಿತು ಬರೆಯುತ್ತಾ ನಿಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಬಹು ವರ್ಷಗಳಿಂದಲೂ ಅಜೀರ್ಣತೆಯಿಂದಲೂ ಮತ್ತು ನರಗಳ ನಿಶ್ಶಕ್ತಿಯಿಂದಲೂ ಬಹು ಬಾಧೆಪಡುತ್ತಿದ್ದೆ. ನಿತ್ಯವೂ ಪ್ರಕಟಣೆಯಾಗುತ್ತಲಿರುವ ಅನೇಕ ಔಷಧಿಗಳನ್ನೆಲಾ ಉಪಯೋಗಿಸಿದೆ. ಇವುಗಳಲ್ಲೆಲ್ಲಾ ಅದ್ಭುತವಾದ ಯೀಸ್ಟ್-ವೈಟು ಮಾತ್ರ ಅಸಮಾನವಾದದ್ದು. ಈಗ ಒಂದು ವರ್ಷದಿಂದಲೂ ಈ ಟೇಬ್ಲೆಟ್ಟುಗಳನ್ನು ಪಯೋಗಿಸಲಾಗಿ ಬಹು ಮಟ್ಟಿನ ಗುಣವನ್ನು ಹೊಂದಿರುವೆನು. ಅನ್ನಾಹಾರವನ್ನು ತಿನ್ನುವುದೇ ಬಹು ಕಷ್ಟನಾಗಿದ್ದಿತು. ಈಗ ಯಾವುದನ್ನಾದರೂ ತಿಂದು ಜೀರ್ಣಿಸಿಕೊಳ್ಳಬಲ್ಲೆ. ಮತ್ತು ಧೃಡ ಕಾಯನಾಗಿಯೂ, ಆರೋಗ್ಯವಾಗಿಯೂ ಇರುತ್ತೇನೆ.

ಕೆಮ್ಮುಲು ಮತ್ತು ನೆಗಡಿಗೆ ಇವು ಶ್ರೇಷ್ಠವಾದದ್ದು. ಪ್ರಯಾಣದಿಂದುಂಟಾಗುವ ದೇಹಾಲಸ್ಯವನ್ನೂ ಇವು ಹೋಗಲಾಡಿಸುವುವು. 12 ವರ್ಷದ ನನ್ನ ಮಗಳು ಮತ್ತು ನಾನು ಇಬ್ಬರೂ ಇದನ್ನು ಈಗ ಉಪಯೋಗಿಸುತ್ತೇವೆ.

ಇದುವರೆಗೆ ಕನಿಷ್ಟಪಕ್ಷ 12 ಜನಕ್ಕಾದರೂ ಇದನ್ನು ಶಿಫಾರಸು ಮಾಡಿರುವೆನು. ಅವರು ತಮ್ಮ ಸರ್ವಸ್ವವನ್ನೇ ಕೊಡಬಲ್ಲರು; ಇದನ್ನು ಮಾತ್ರ ಬಿಟ್ಟಿರಲಾರರು. ಗರ್ಭಿಣಿ ಸ್ತ್ರೀಯರಿಗೂ ಇದು ಶ್ರೇಷ್ಠೋತ್ತಮವಾದದ್ದೆಂದು ನನ್ನ ಸ್ನೇಹಿತರೊಬ್ಬರು ಇದನ್ನು ಮನೆಯಲ್ಲಿ ಯಾವಾಗಲೂ ಇಟ್ಟುಕೊಂಡಿರುತ್ತಾರೆ ವೈದ್ಯಮಾಡುವ ನುತ್ತೊಬ್ಬ ಸ್ನೇಹಿತಳು ನಾನು ಹೇಳಿದ ರೀತಿ ಇದರಿಂದ ಕಂಡುಬಂದ ಅದ್ಭುತ ಮಹಿಮೆಯನ್ನು ತಿಳಿಸಲು, ಈಗ ತಾನೇ ನನ್ನಲ್ಲಿಗೆ ಬಂದಿರುತ್ತಾಳೆ.

ನಿಮ್ಮ 'ಟೇಬ್ಲಟ್ಟು'ಗಳ ಮಹಿಮೆ ಆಶ್ಚರ್ಯಕರವಾದದ್ದು. ಯಾವುದನ್ನಾದರೂ ಇಲ್ಲದಿರಬಲ್ಲೆ; ಆದರೆ ಯೀಸ್ಟ್-ವೈಟನ್ನು ಮಾತ್ರ ಎಂದಿಗೂ ಬಿಟ್ಟಿರಲಾರೆ Mrs N.G,

ಅಯ್ಯಾ, ನಿಮ್ಮ ಯೀಸ್ಟ್—ವೈಟ್ ಟೇಬ್ಲೆಟ್ಟುಗಳು ಅಮೋಘವಾದದ್ದೆಂದು ಮತ್ತೊಮ್ಮೆ ಈಗ ನಿಮಗೆ ಬರೆಯುತ್ತಲಿದ್ದೇನೆ ನರಗಳ ನಿಶ್ಶಕ್ತಿಯಿಂದ ನನ್ನ ಕೈಯನ್ನು ಉಪಯೋಗಿಸುವುದಕ್ಕೇ ಆಗುತ್ತಿರಲಿಲ್ಲ. 4 ಬಾಟಲು ನಿಮ್ಮ ಟೇಬ್ಲೆಟ್ಟುಗಳನ್ನು ಸೇವಿಸಿದ ಮೇಲೆ ಈಗ ಮೊದಲಿನ ಸಂಪೂರ್ಣ ಆರೋಗ್ಯವನ್ನು ಪಡೆದಿರುತ್ತೇನೆ. ಎಲ್ಲಾ ಬಾಧೆಗಳನ್ನೂ ಮತ್ತು ಮನಸ್ಸಿನ ನಿರುತ್ಸಾಹತೆಯನ್ನೂ ಹೋಗಲಾಡಿಸುವುದೆಂದು ಇದರ ವಿಚಾರ ನನ್ನ ಸ್ನೇಹಿತರಿಗೆ ಯಾವಾಗಲೂ ಹೇಳುತ್ತಲೇ ಇರುವೆನು. ಮಿಸೆಸ್ 'O'

ಇದರ ರಹಸ್ಯ
ಯೀಸ್ಟ್—ವೈಟ್‌ನ ಅಪಾರ ಶಕ್ತಿಯ ರಹಸ್ಯ ಏನೆಂದರೆ ಅದು ವೈಟಾಮಿನ್ 'ಬಿ' ತುಂಬಿರುವ **ಸ್ವಚ್ಛವಾದ ಔಷಧಯುಕ್ತ ಯೀಸ್ಟ್** ಮತ್ತು ಇತರ ಅಮೂಲ್ಯ ಶಕ್ತಿವರ್ಧಕ ಔಷಧಗಳು ಪ್ರಾಮುಖ್ಯ ವೈದ್ಯರು ಹೇಳಿದಂತೆ ಶಾಸ್ತ್ರರೀತಿಯಲ್ಲಿ ಬಹಳ ಜಾಗರೂಕತೆಯಿಂದ ಬೆರಸಲ್ಪಟ್ಟು ತಯಾರಾಗಿದೆ. ಯೀಸ್ಟ್—ವೈಟ್ ಅತಿ ತೀವ್ರವಾಗಿ ಫಲಿಸುವ ಶಕ್ತಿವರ್ಧಕ ಔಷಧ.

ಗುಣವಿಲ್ಲವೋ—ದುಡ್ಡು ಬೇಡ
ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೋ—ದುಡ್ಡು ಬೇಡ" ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ತರಾಗಿದ್ದರೂ, ಅಥವಾ ಯಾವ ಕಾರಣದಿಂದಲಾದರೂ ಸರಿಯೇ ಉತ್ಸಾಹರಹಿತರಾಗಿದ್ದರೂ ಔಷಧ ವ್ಯಾಪಾರಿಯಿಂದಲೋ ಅಥವಾ ಸ್ಟೋರಿನಿಂದಲೋ ಒಂದು ಶೀಷೆ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲೆಟ್‌ಗಳನ್ನು ತರಿಸಿಟ್ಟುಕೊಳ್ಳಿ. ಕ್ಲಪ್ತ ರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲೀ ಪ್ಯಾಕೇಟನ್ನು "ಗ್ಯಾರೆಂಟಿ ಸೀಲ್" ಸಹಿತ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್—ವೈಟ್ ಟೇಬ್ಲೆಟ್‌ಗಳು ದೊರೆಯುವುವು. ಸೋಲ್ ಮ್ಯಾನುಫ್ಯಾಕ್ಚರರ್ಸ್:
ಇರ್ವಿಂಗ್ಸ್ ಯೀಸ್ಟ್—ವೈಟ್ ಲಿಮಿಟೆಡ್,
ವಾಟ್‌ಫೆರ್ಡ್, ಇಂಗ್ಲಾಂಡ್.

YOUR SHARE OF PROSPERITY

Some people, you may have noticed, get more than their share of prosperity while others get less. In some cases it is no doubt all a matter of luck. But often the difference may be traced to a modest Bank account. Are you enjoying your due share of prosperity? If not, opening a Bank account may help you to turn the tide of so-called luck.

CANARA BANK, LIMITED.
ESTD: 1906.

ಕಂಠೀರವ
KANTEERAVA
KANARESE, BI-WEEKLY

XXIII] ಮಂಗಳೂರು, ತಾರೀಕು ೯—೧—೧೯೪೨ [೮೧
೧೮೬೩ ವೃಷ ಸಂವತ್ಸರದ ಪುಷ್ಯ ಬ। ೭ ಶುಕ್ರವಾರ

ಕಾಮನ್ಸ್ ಮಂದಿರದ ಮಗುವಂತೆ— ಮಿ। ಚರ್ಚ್‌ಹಿಲ್ಲರು

ಪ್ರೆಸಿಡೆಂಟ್ ರುಜ್‌ವೆಲ್ಟರ ಭೇಟಿಗಾಗಿ ಮಿ। ಚರ್ಚ್‌ಹಿಲ್ಲರು ಅಮೆರಿಕಕ್ಕೆ ಚಿತ್ತೈಸಿದುದು, ನಿರ್ವಿವಾದವಾಗಿಯೂ ಅವರ ಜೀವಮಾನದಲ್ಲಿ ಒಂದು ಮಹತ್ವದ ಘಟನೆ ಎಂದೇ ಹೇಳಬೇಕು. ಅವರೆನ್ನುವಂತೆ ಅದು ಅವರ ಜೀವನದಲ್ಲೊಂದು "ರೋಮಾಂಚಕಾರಿಯಾದ ಘಟನೆ"ಯಾಗಿರಬಹುದು; ಅವರು ಅಮೆರಿಕದ ಸೆನೆಟ್ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದುದು ಇತಿಹಾಸ ಪ್ರಸಿದ್ಧವೆಂದಾಗಬಹುದು; ಅಮೆರಿಕದ ಮುದ್ರಾಲಯಗಳೂ, ಪತ್ರಿಕೆಗಳೂ ಮಿ। ಚರ್ಚ್‌ಹಿಲ್ಲರ ಮೇಲೆ ಸ್ತೋತ್ರದ ಸುರಿಮಳೆಯನ್ನೇ ಸುರಿಸುತ್ತಿರಬಹುದು; ಬ್ರಿಟಿಶ್ ಪ್ರಧಾನರು ತಮ್ಮ ಈ ಭೇಟಿಯಿಂದ ಬ್ರಿಟಿಷ್ ಅಮೆರಿಕಗಳ ಬಾಂಧವ್ಯವನ್ನು, ಶಾಶ್ವತವಾದ, ಅಮೂಲ್ಯವಾದ ಸ್ನೇಹದ ರಜ್ಜುವಿನಿಂದ ಕಟ್ಟಿ ಹಾಕಿರಲೂ ಬಹುದು; ಮೇಲಾಗಿ ಅವರು ತಮ್ಮ ಮುಗುಳ್ನಗೆಯಿಂದಲೇ, ಇಡೀ ಅಮೆರಿಕವನ್ನೇ ಗೆದ್ದು, ತಮ್ಮ ವಶ ಮಾಡಿಕೊಂಡಿರಬಹುದು. ಹೀಗೇ ಅವರು ಹಲವು ಅಸಾಧ್ಯ ಅಥವಾ ಕಷ್ಟಸಾಧ್ಯ ಕಾರ್ಯಗಳನ್ನು ಅಲ್ಲೆ ಮಾಡಿ ಪೂರೈಸಿರಬಹುದು. ಆದರೆ, ಅವರು ಎಕ್ಕುಳಿದ ಡೆಮೊಕ್ರಸಿಯ ಇಡೀ ಪ್ರಪಂಚವನ್ನು, ಇನ್ನು ಮುಂದೆ ಹಿಡಿಯಬೇಕಾದೀತೇ ಎಂಬ ಸಂದೇಹ ಮಾತ್ರ ನಮಗಿನ್ನೂ ತಪ್ಪಿಲ್ಲ.

ಮಿ। ಚರ್ಚ್‌ಹಿಲ್ಲರು, ಅದೊಂದು ಸಮಯ ಸ್ಫೂರ್ತಿಯ ವೇಳೆಯಲ್ಲಿ "ನಾನು ಕಾಮನ್ಸ್ ಮಂದಿರದ ಮಗು; ನಾನು ನಮ್ಮ ತಂದೆಯ ಮನೆಯಲ್ಲಿ ಬೆಳೆದು ಅಲ್ಲಿ ಡೆಮೊಕ್ರೆಸಿಯನ್ನು ನಂಬುವುದಕ್ಕೆ ಕಲಿತೆ" ಎನ್ನುತ್ತ "ಜನರನ್ನು ನಂಬಿ ನಡೆ" ಎಂಬುದೇ ನನಗೆ ನನ್ನ ತಂದೆಯವರಿಂದ ಆಗ ದೊರಕಿದ ಸಂದೇಶ. ಆದುದರಿಂದಲೇ, ಅಟ್ಲಾಂಟಿಕ್‌ನ ಎರಡು ಕಡೆಗಳಲ್ಲಿಯೂ "ಹಕ್ಕು ಬಾಧ್ಯತೆ ಮತ್ತು ಏಕಾಧಿಕಾರ"ದ ವಿರುದ್ಧವಾಗಿ ಹರಿಯುತ್ತಿದ್ದ ಆ ಪ್ರವಾಹದೊಂದಿಗೆ, ನಾನು ನನ್ನ ಜೀವಕಾಲದಲ್ಲೆಲ್ಲ "ಸಮರಸ"ದಿಂದ ಕೂಡಿ ನಡೆಯುತ್ತಿದ್ದು, "ಜನರಿಂದ, ಜನರಿಗಾಗಿ ಆಗಿರುವ ಜನತಾ ಸರಕಾರ"ವೆಂಬ ಈ ತತ್ವದ ಕಡೆಗೆ, ಧೃಡ ವಿಶ್ವಾಸದಿಂದ ಸಾಗುತ್ತಿದ್ದೇನೆ" ಎಂದು ಶ್ರುತಪಡಿಸಿರುವರು. ಸರಿಯೇ. ಆದರೆ ಅವರ ಈ ನುಡಿಗಳ ಅರ್ಥ ಅಮೆರಿಕದ ಸೆನೆಟ್ ಮೆಂಬರುಗಳಿಗೆ ಹೇಗಾಗಿದೆಯೋ ಗೊತ್ತಿಲ್ಲವಾದರೂ, ರಾಜಕೀಯ ಭಾರತವು ಇದರಿಂದ ಉತ್ಸಾಹಗೊಳ್ಳುವಂತಿಲ್ಲ!

ಮಿ। ಚರ್ಚ್‌ಹಿಲ್ಲರು ಜನ್ಮತಃ "ಪ್ರಜಾ ಪ್ರಭುತ್ವ"ದಲ್ಲಿ ವಿಶ್ವಾಸವಿರುವವರು. ಹೌದು; ಬಿಳಿ ಡೆಮಾಕ್ರಸಿಯಲ್ಲಿ! ಅವರ ತಂದೆ ತಮ್ಮ ಸಂದೇಶದಲ್ಲಿ "ಜನರನ್ನು ನಂಬಿ ನಡೆ" ಎಂದು ಅವರಿಗೆ ತಿಳಿಸಿದ್ದರು. ಅಂತೆ ಮಿ। ಚರ್ಚ್‌ಹಿಲ್ಲರೂ, ನಿಜವಾಗಿಯೂ ತಮ್ಮ ಜನವನ್ನೂ, ಅಮೆರಿಕದ ಜನರನ್ನೂ, ಜಗತ್ತಿನ ಇತರ ಯಾವತ್ತು ಬಿಳೇ ಮಂದಿಯನ್ನೂ ನಂಬಿ ನಡೆಯುವಲ್ಲಿ ಏನು ಸಂದೇಹ? ಆದರೆ ಬ್ರಿಟಿಶ್ ಪ್ರಧಾನರು ಇಂಡಿಯದಲ್ಲಿನ ೪೦೦ ಮಿಲ್ಯ ಪ್ರಜೆಗಳನ್ನು ಎಂದಾದರೂ ನಂಬಿರುವರೇ? ಅವರ ರಾಜಕೀಯ ಜೀವನವನ್ನು ವಿಮರ್ಶಿಸಿದರೆ, ಇಂಡಿಯದ ವಿಷಯಕವಾದ ಅವರ ಭಾಷಣಗಳನ್ನೋದಿದರೆ, ಅವರು ಇಂಡಿಯದವರ ವಿಷಯದಲ್ಲಿ ಅವಿಶ್ವಾಸವನ್ನಿರಿಸಿಕೊಂಡಿರುವುದೂ, ಇಂಡಿಯದ ಪ್ರಜಾಧಿಪತ್ಯದ, "ಸೆಲ್ಫ್ ಗವರ್ನ್‌ಮೆಂಟಿನ" ಹಾದಿಯಲ್ಲಿ ಅಡ್ಡ ಬಂದುದೂ ತೋರದಿರದು. ಅಬ್ರಹಾಂ ಲಿಂಕನರ "ಜನರಿಂದ, ಜನರಿಗಾಗಿರುವ ಜನತಾ ಸರಕಾರ"ದ ತತ್ವದ ಆಚರಣೆಗಾಗಿ, ರಾಷ್ಟ್ರೀಯ ಭಾರತವು ಅಂದಿನಿಂದಲೂ ಪದೇ ಪದೇ ಕೇಳುತ್ತಿಲ್ಲವೇ? ಮಿ.ಚರ್ಚ್‌ಹಿಲ್ಲರು ಎಂದಾದರೂ ಅದನ್ನು ಕಿವಿಯ ಮೇಲೆ ಹಾಕಿಕೊಂಡರೆ? ಮನ್ನಿಸಿದರೆ? ಕೂನೆಗೆ ರಾಷ್ಟ್ರೀಯ ಭಾರತದ ರಾಜಕೀಯ ಆಕಾಂಕ್ಷೆಗಳ ವಿಷಯದಲ್ಲಿ ಯಾದರೂ ಒಂದಿಷ್ಟು ಸಹಾನುಭೂತಿಯನ್ನಾದರೂ ಸೂಚಿಸಿದರೇ?

"ಹಕ್ಕು ಬಾಧ್ಯತೆ, ಏಕಾಧಿಕಾರ" ಇದಕ್ಕೆ ಬ್ರಿಟಿಶ್ ಪ್ರಧಾನರು ವಿರೋಧಿಗಳು; ಹಾಗೆಂದು ಅವರದೇ ಹೇಳಿಕೆ. ಆದರೆ ಈ ದೇಶದಲ್ಲಿ ಬ್ರಿಟಿಷ್ ಜನರೇ ಆ "ಹಕ್ಕು ಬಾಧ್ಯತೆ ಮತ್ತು ಸರ್ವಾಧಿಕಾರ"ಗಳನ್ನು ಅನುಭವಿಸುವಂತೆ ಕಲ್ಪಿಸಲಾದ ಆ ಕಾರ್ಯನೀತಿಯನ್ನು ಮಿ. ಚರ್ಚ್‌ಹಿಲ್ಲರು ಅರಿಯರೇ? ಅಟ್ಲಾಂಟಿಕ್ ಪ್ರಕಟಣೆಯಲ್ಲಿ "ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಸರಕಾರಗಳನ್ನು ತಮ್ಮ ತಮ್ಮ ಇಚ್ಛೆಯಂತೆಯೇ ರೂಪಿಸಿಕೊಳ್ಳುವ ಆ ಸ್ವಾತಂತ್ರ್ಯ"ವನ್ನು ಅವುಗಳಿಗೆ ಕೊಡಲಾಗಿದ್ದಿತು. ಆದರೆ ಮಿ. ಚರ್ಚ್‌ಹಿಲ್ಲರು ಇಂಡಿಯವನ್ನು ಮಾತ್ರ, ಆ ಪ್ರಕಟಣೆಯಿಂದ, ಸಂಪೂರ್ಣವಾಗಿಯೂ ಹೊರದೊಬ್ಬಿದರು. ಕಾರಣವೇನು ಬಲ್ಲಿರಾ? ಇಂಡಿಯವು ತನ್ನ ಇಚ್ಛೆಯಂತೆ ತನ್ನ ಸರಕಾರವನ್ನು ರೂಪಿಸಿಕೊಂಡ ಕ್ಷಣದಲ್ಲಿಯೇ, ಬ್ರಿಟಿಶರು ಇಲ್ಲಿ ಈಗ ಅನುಭವಿಸುತ್ತಿರುವ ಆ ಹಕ್ಕುಬಾಧ್ಯತೆ ಮತ್ತು ಏಕಾಧಿಕಾರಕ್ಕೆ ಖಾರ ಬರುವುದು— ಅಷ್ಟೇ ತಾನೇ?

ಸದ್ಯ ಇಂಡಿಯದ ಲಿಬರಲ್ ಪಕ್ಷದ ಮುಂದಾಳುಗಳು ಬ್ರಿಟಿಶ್ ಪ್ರಧಾನರಿಗೆ ಕೊಟ್ಟ ಆ ಕೇಬ್ಲ್‌ನ ಮೇರೆಗೆ, ಮಿ. ಚರ್ಚ್‌ಹಿಲ್ಲರು ನಡೆಸಿಕೊಟ್ಟರೆ, ಆಗ ಅವರ "ಹಕ್ಕು ಬಾಧ್ಯತೆ ಮತ್ತು ಏಕಾಧಿಕಾರ"ದ ಮಾತು ನಿರ್ವಿಂಚನೆಯದೆಂದು ಖಚಿತವಾಗುವುದು; ಇಲ್ಲದಿದ್ದರೆ ಭಾರತದ ಮಟ್ಟಿಗೆ ಮಿ. ಚರ್ಚ್‌ಹಿಲ್ಲರು, ಯಥಾಪ್ರಕಾರವೆಂಬ ಈ ಅಸಮಾಧಾನ ಎಲ್ಲೆಲ್ಲೂ ಹೊಗೆಯಾಡಿಕೊಂಡೇ ಇರುವುದು.

ಬರ್ಮದಲ್ಲಿ

ರಂಗೂನಿನ ಉತ್ತರ ಭಾಗದಲ್ಲಿ ಜಪಾನರು ಬಾಂಬುಗಳನ್ನು ಸುರಿಸಿದ್ದಾರೆ. ಅಲ್ಲಿನ ಸಮೀಪವಿರುವ ವಿಮಾನ ನಿಲ್ದಾಣದ ಸಮೀಪವಿರುವ ಕಟ್ಟಡಗಳಿಗೆ ಕೊಂಚ ಪೆಟ್ಟಾಗಿದೆ ಶತ್ರುಗಳ ೬ ವಿಮಾನಗಳು ಇಲ್ಲಿ ಧ್ವಂಸವಾದುವು.

ಮಂಗಳೂರು ಮುನಿಸಿಪಲ್ ಕೌನ್ಸಿಲಿನಲ್ಲಿ

ಕಳೆದ ಬುಧವಾರ ಸಂಜೆ ಸ್ಥಳೀಯ ಮುನ್ಸಿಪಲ್ ಕೌನ್ಸಿಲ್ ಹಾಲಿನಲ್ಲಿ ಈ ಮುನಿಸಿಪಲಿಟಿಯವರು ಶ್ರೀಮತಿ ಕಮಲಾದೇವಿಯವರಿಗೊಂದು ಮಾನ ಪತ್ರವನ್ನು ಸಮರ್ಪಿಸಿ ಅವರನ್ನು ಗೌರವಿಸಿದರು. ಕೌನ್ಸಿಲರ ಪರವಾಗಿ ಕೌನ್ಸಿಲಿನ ವೈಸ್ ಚೆಯರ್‌ಮ್ಯಾನ ಎಂ. ಎಲ್. ಸಿ. ಪ್ಯಾಸ್‌ರವರು ಮಾನ ಪತ್ರವನ್ನೋದಿ ಶ್ರೀಮತಿಯವರಿಗೆ ಅದನ್ನು ಒಪ್ಪಿಸಿದ ಬಳಿಕ ಶ್ರೀಮತಿಯವರು ತಾವು ಎದೇಶಗಳಲ್ಲಿ ನೋಡಿದ ಪೌರಕಾರ್ಯಗಳ ವ್ಯವಸ್ಥೆಗಳ ಕುರಿತು ಮನನೀಯವಾದ ಭಾಷಣ ಮಾಡಿದರು. ಮುನ್ಸಿಪಲ್ ಕೌನ್ಸಿಲರುಗಳೂ, ಚೆಯರ್‌ಮ್ಯಾನರೂ ಅಲ್ಲದೆ ಆಮಂತ್ರಿತರಾದ ಹಲವು ಮಂದಿ ಅಧ್ಯ ನಾಗರಿಕರೂ ಈ ಸಮಾರಂಭದಲ್ಲಿ ಸಹಭಾಗಿಗಳಾಗಿದ್ದರು. ಕಾಂಗ್ರೆಸಿನವರೂ ಹಲವರು ಇದಕ್ಕೆ ದಯೆಮಾಡಿಸಿದ್ದರು.

ಹರಿಜನರಿಗಾಗಿ ಲೇಬರ್ ಕೋಆಪರೇಟಿವ್ ಯೂನಿಯನ್

ಸ್ಥಳೀಯ ಸೆಂಟ್ರಲ್ ಕೂಒಪರೇಟಿವ್ ಬೇಂಕಿನ ಆಶ್ರಯದಲ್ಲಿ ಕಳೆದ ತಾ. ೫ರಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದವರೂ, ಜಿಲ್ಲಾ ಡಿಪ್ರೆಸ್ಡ್ ಕ್ಲಾಸಸ್ ಎಸೋಸಿಸನವರೂ, ಜಿಲ್ಲಾ ಕೂಒಪರೇಟಿವ್ ಎಡ್ವಾನ್ಸ್‌ಮೆಂಟ್ ಸೊಸೈಟಿಗಳವರೂ, ಹರಿಜನರ ಉದ್ಧಾರ ಕಾರ್ಯದಲ್ಲಿ ಆಸಕ್ತಿ ಇರುವ ಇತರ ಮಹನೀಯರೂ ಸೆಂಟ್ರಲ್ ಬೇಂಕಿನ ಕಟ್ಟಡದಲ್ಲಿ ಶ್ರೀ। ಎಂ. ವೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಈ ಸಭೆಗೆ ಸಹಕಾರ ಸಂಘಗಳ ಡಿ. ರಿಜಿಸ್ಟ್ರಾರ್, ಶ್ರೀ। ಕೆ. ಅಚ್ಯುತನ್ ನಾಯರ್, ಶ್ರೀ। ಎ. ಬಿ. ಸೆಟ್ಟಿ ಎಂ. ಎಲ್. ಎ. ಮುಂತಾದ ಮಹನೀಯರು ದಯೆಮಾಡಿಸಿದ್ದರು. ಶ್ರೀ। ಶಿವರಾಯರು ಈಗಿರುವ ಸಹಕಾರದ ಸಂಘಗಳೆಲ್ಲ ಸಾಲ ಕೊಡುವ ಸಂಘಗಳೆಂದೂ, ಹರಿಜನರಿಗೆ ಹೇರಳ ಸಾಲವಿದೆ ಎಂದೂ, ಕೆಲಸವಿಲ್ಲದಿರುವುದರಿಂದ ಆ ಹರಿಜನರು ಆ ಸಾಲವನ್ನು ಹಿಂದೆ ತೆರುವ ಸ್ಥಿತಿಯಲ್ಲಿ ಇಲ್ಲವೆಂದೂ, ಆದುದರಿಂದ ಹರಿಜನರಿಗಾಗಿ ಒಂದು ಲೇಬರ್ ಯೂನಿಯನ್ನು ರಚಿಸಿ, ಆ ಯೂನಿಯನಿನ ಮೆಂಬರರಿಗೆ ಕಂಟ್ರಾಕ್ಟ್ ಕೆಲಸವನ್ನು ದೊರಕಿಸಿಕೊಟ್ಟು ಹಾಗೆ ಅವರ ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸಬೇಕೆಂದೂ ಸೂಚಿಸಿದರು. ಡಿ. ರಿಜಿಸ್ಟ್ರಾರರು ಯೂನಿಯನಿನ ಕ್ರಮ ನಿಬಂಧನೆಗಳನ್ನು ವಿವರಿಸಿದರು. ಈ ಲೇಬರ್ ಯೂನಿಯನನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು.

ಕೆನರಾ ಕ್ಲಬ್ಬಿನಲ್ಲಿ ಕನ್ನಡದ ವಾಚನ

ಕೆನರಾ ಕ್ಲಬ್,–ಮಂಗಳೂರು ಇಲ್ಲಿ ಶ್ರೀ। ಮುಳಿಯ ತಿಮ್ಮಪ್ಪಯ್ಯ, ಸ್ಥಳೀಯ ಸೈ. ಅ. ಕಾಲೇಜಿನ ಹಿರಿಯ ಕರ್ಣಾಟಕ ಪಂಡಿತ ಅಳಿಯ, ಕನ್ನಡದ ವಾಚನವನ್ನು, ಶ್ರೀ। ಎಸ್. ಎಸ್. ಕಿಲ್ಲೆಯವರ ಸಹಾಯದೋ। ನೆ ಮಾಡಿದರು. ಇದಕ್ಕೆ ಜಿಲ್ಲಾ ಕಲೆಕ್ಟರ್ ಶ್ರೀ। ಎಂ. ಎ. ಸುಬ್ರಹ್ಮಣ್ಯನ್, ಅವರ ಪತ್ನಿ, ಜಿಲ್ಲಾ ಜಡ್ಜ

ಕೊನೆಯಚ್ಚು

ಬ್ರಿಟಿಷರು ಕೌರಟನಿನಿಂದ (ಸುಲಯ) ಹಿಂದೆ ಸರಿದಿರುವರು; ರಷ್ಯದವರು ಮೆಜೊಯಿಸ್ಕನ್ನು ತಿರುಗಿ ಹಿಡಿದರು; ಫಿಲಿಪ್ಪೈನ್ಸ್‌ಗಳಲ್ಲಿ ಜಪಾನರ ದಾಳಿಗಳ ಭರ ಜೋರಾಗಿದೆ; ೪೦ ಸಾವಿರ ಜಪಾನರನ್ನು ಚೀನಿಯರು ಚಂಗ್ಸಾದ ಬಳಿ ಸುತ್ತು ಕಟ್ಟಿದ್ದಾರೆ; ಅವರನ್ನು ಜೋನಿನೋಳಗೆ ಸಿಕ್ಕಿಸಿದ್ದಾರೆ.

ಶ್ರೀ। ಪಾರ್ಥಸಾರಥಿ ಅಯ್ಯರ್, ರಾ. ಸಾ. ರಂಗನಾಥ ಪೂಂಜ, ಅವರ ಪತ್ನಿ ಮೊದಲಾದ ಅಧ್ಯರು ನೆರೆದಿದ್ದು ವಾಚನವನ್ನು ಕೇಳಿ ತಮ್ಮ ಮೆಚ್ಚಿಗೆಯನ್ನು ತೋರ್ಪಡಿಸಿದರು. ಶ್ರೀ। ತಿಮ್ಮಪ್ಪಯ್ಯನವರು, "ಕವಿ ರಾಜಮಾರ್ಗ" "ಪಂಪ ಭಾರತ" "ರಾಘವಾಂಕನ ಹರಿಶ್ಚಂದ್ರ" ಮುಂತಾದವುಗಳಿಂದ ಈಗಿನ ಕಾಲಕ್ಕೆ

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 811/1941
O. S. 337/1928

ಪಕ್ರುದ್ದಿನ್ ಬ್ಯಾರಿ ಕೂಡಾ— **ಅರ್ಜಿದಾರರು**

ಶ್ರೀ ಕಾವಿ ಸುಬ್ರಾಯ ದೇವರು ಕೂಡಾ— **ರೆಸ್ಪೋಂಡೆಂಟರು**

2ರಿಂದ 5ನೇ ರೆಸ್ಪೋಂಡೆಂಟರಿಗೆ

ಕಾಸರಗೋಡು ತಾಲೂಕು ಪಾವೂರು ಗ್ರಾಮದಲ್ಲಿರುವ 2ನೇ ಪದ್ಮನಾಭ ಹೊಳ್ಳ—ಸುಬ್ರಾಯ ಹೊಳ್ಳರ ಮಗ—3ನೇ ಸುಬ್ರಾಯ ಹೊಳ್ಳ 4ನೇ ಶಂಕರನಾರಾಯಣ ಹೊಳ್ಳ–ಸುಬ್ರಾಯ ಹೊಳ್ಳರ ಮೈನರ್ ಮಕ್ಕಳು ಇವರ ಗಾರ್ಡಿಯನಾಗಿ ಪದ್ಮನಾಭ ಹೊಳ್ಳರ ಹೆಂಡತಿ ಗೌರಮ್ಮ—5ನೇ ನರಸಿಂಹ ಹೊಳ್ಳ–ಮಹಾಲಿಂಗ ಹೊಳ್ಳರ ಮೈನರ್ ಮಗ, ತಾಯಿ ಕಾಶಮ್ಮ ಗಾರ್ಡಿಯನಾಗಿ—

ಸದ್ರಿ ಮೇಲಿನ ವ್ಯಾಜ್ಯ O. S. 337/1928ನೇಯಲ್ಲಿ ಆದ ಡಿಕ್ರಿಯನ್ನು ಮದ್ರಾಸ್ ಆಕ್ಟ್ IV of 1938ನೇ ಮೇರೆಗೆ ಸ್ಕೇಲಿಂಗ್ ಡವುನ್ ಮಾಡಿ ಡಿಕ್ರಿಯನ್ನು ದುರಸ್ತಿಪಡಿಸಬೇಕೆಂತ ವಗೈರೆ ಸದ್ರಿ ಮೇಲಿನ ಅರ್ಜಿದಾರ ಸದ್ರಿ ಅರ್ಜಿ ನಂಬ್ರ 811/1941ನ್ನು ಕೊಟ್ಟಿರುತ್ತಾರೆ.

ಆದುದರಿಂದ ಈ ಮೂಲಕ ನಿಮಗೆ ತಿಳಿಸುವುದೇನೆಂದರೆ ಸದ್ರಿ ಅರ್ಜಿಯನ್ನು ಇದೇ ಬರುವ ತಾ. 21–1–1942ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದು ಯಾ ವಕೀಲರ್‌ದ್ವಾರ ಈ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಅದನ್ನು ಹಾಜರು ಮಾಡತಕ್ಕದ್ದು—ಇಲ್ಲವಾದರೆ ಅದನ್ನು ನಿಮ್ಮ ಗೈರು ಹಾಜರಿನಲ್ಲಿಯೇ ತೀರ್ಮಾನಿಸಲ್ಪಡುವುದು.

(By order of the Court)

H. Dasanna Alva,
VAKIL.

Mangalore, Dated 27—12—41.

ಈ ಹೆಸರಿದೆಯೇನೋ ನೋಡಿ

EVEREADY
TRADE-MARK

ನಿಮ್ಮ



ಇವು ಮೂರನ್ನೂ ಒಟ್ಟಿಗೆ ಉಪಯೋಗಿಸಿದಲ್ಲಿ ಹೆಚ್ಚುಕಾಲ-ಹೆಚ್ಚು ಪ್ರಕಾಶಮಾನವಾದ ಬೆಳಕು ಸಿಗುವುದು

ಹೊಂದಿಸಿಕೊಳ್ಳಬಹುದಾದ "ಅಹಿಂಸೆ" "ಸತ್ಯವ್ರತ" "ಅಸ್ಪೃಶ್ಯತಾ"ಗಳಿಗೆ ಸಂಬಂಧಿಸುವ ಭಾಗಗಳನ್ನೆತ್ತಿ ಮನೋರಂಜಕವಾಗಿ ಓದಿ ತೋರಿಸಿದರು.

ಸರ್ ಅಕ್ಬರ್ ಹೈದ್ರಿಯವರು

ಹೈದರಾಬಾದಿನ ಮಾಜಿ ಪ್ರಧಾನರೂ, ವೈಸರಾಯರ ಎಸ್ತರಣದ ಎಕ್ಸಿಕ್ಯೂಟಿವ್ ಕೌನ್ಸಿಲಿನ ಒಬ್ಬ ಮೆಂಬರರೂ ಆದ ಸರ್ ಅಕ್ಬರ್ ಹೈದ್ರಿಯವರು ಹೊಸ ಡಿಲ್ಲಿಯಲ್ಲಿ ದಿವಂಗತರಾದರು.

ಜಿ. ಎ. ಸರ್ಕಸ್—ಮಂಗಳೂರು

ಈ ಸರ್ಕಸ್ ಕಂಪೆನಿಯವರು ಕಳೆದ ತಾ. ೭ರಿಂದ ತಮ್ಮ ಅಮೋಘವಾದ ಪ್ರಯೋಗಗಳನ್ನು ಇಲ್ಲಿ ಪ್ರದರ್ಶಿಸಲಾರಂಭಿಸಿದ್ದಾರೆ.

ಜಪಾನರ ತೇಜೋಭಂಗ

ಜನರಲ್ ಮೈಕ್ ಆರ್ಥರವರ ಸೇನೆಗಳು, ಜಪಾನೀಯರಿಗೆ ಅಪಾರ ನಷ್ಟವನ್ನು ಉಂಟು ಮಾಡಿ ಅವರ ಬೆನ್ನು ಮುರಿದಿದೆ—ಹೀಗೆಂದು ವಾರ್ತೆ. ಯುದ್ಧವಾರಂಭವಾದ ಅಂದಿನಿಂದ ಇಷ್ಟು ದೊಡ್ಡ ಪರಾಭವವು ಜಪಾನೀಯರಿಗೆ ಎಂದೂ ಉಂಟಾಗಿರಲಿಲ್ಲವಂತೆ. ಈ ಕಾಳಗವು ಮನಿಲದ ಬಳಿ ನಡೆಯಿತು. ಇದರಲ್ಲಿ ಅಮೆರಿಕದವರ ಮತ್ತು ಬ್ರಿಟಿಷರ ನಷ್ಟವು ಅತ್ಯಲ್ಪವೆಂದು ಹೇಳಲಾಗಿದೆ.

ಜಪಾನೀಯುದ್ಧದ ಹಡಗಿನ ಮೇಲೆ ಅಮೆರಿಕದವರು ಬಲವಾಗಿ ಬಾಂಬು ಹಾಕಿದರು; ಜಪಾನರ ಒಂದು ಡಿಸ್ಟ್ರಾ

ಗುಣಮಾಡಲು ಅಸಾಧ್ಯವೆಂದು ತಿಳಿಯಲ್ಪಟ್ಟ ಕಲಿಜ ಮತ್ತು ಗುಲ್ಮ ರೋಗಗಳಿಂದ ಈ ಅಪೂರ್ವವಾದ ಔಷಧಿಯು ಸಾವಿರಾರು ಮಕ್ಕಳನ್ನು ಬದುಕಿಸಿರುತ್ತದೆ.

ಜಮ್ಮಿಯವರ

ಕರ್ಪೂರ

ಇದನ್ನು ಹಲವು ಮಂದಿ ಸುಪ್ರಸಿದ್ಧ ಡಾಕ್ಟರುಗಳು ಅತ್ಯುತ್ಕೃಷ್ಟವಾದ ವೈದ್ಯಕೀಯ ವಿಷಯವೆಂದು ಕೊಂಡಾಡುತ್ತಿರುವರು.

ಎಲ್ಲಾ ಕೆಮಿಸ್ಟರಲ್ಲಿ ಆಥವಾ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್,
1/1 ಬ್ರಾಡೀಸ್ ರೋಡ್, ವೈಲಾಪುರ, ಮದ್ರಾಸು ಆಲ್ಲದೆ, ಮುಂಬಯಿ, ಕಲ್ಕತ್ತಾ, ಲಕ್ನೋ, ಬೆಂಗಳೂರು ಮತ್ತು ತಿರುಚಿನಾಪಳ್ಳಿ.

ಯರನ್ನು ಮುಳುಗಿಸಲಾಯಿತು ಎಂದು ತಿಳಿದು ಬರುತ್ತಿದೆ.

ಶ್ರೀಮತಿ ಕಮಲಾ ದೇವಿಯವರಿಗೆ

ಮಂಗಳೂರು ಮುನಿಸಿಪಲ್ ಕೌನ್ಸಿಲ್ ಒಪ್ಪಿಸಿದ ಮಾನಪತ್ರ

ಸಭ್ಯ ಮಹಿಳೆಯವರೇ! ಈ ಮುನಿಸಿಪಾಲಿಟಿ ತನ್ನ ನಾಗರಿಕರಲ್ಲಿ ಸಮರ್ಪಿಸಿದ ಮಾನಪತ್ರಗಳಲ್ಲಿ ಇದೇ ಮೊದಲನೆಯದು. ನೀವು ಈ ಬಹುಮಾನಕ್ಕೆ ಅರ್ಹರೆಂದು ನಮ್ಮ ಅಭಿಪ್ರಾಯ ಏಕೆಂದರೆ, ನೀವು ಸಮಗ್ರ ಭಾರತದಲ್ಲೆಲ್ಲ ಖ್ಯಾತಿಯನ್ನು, ಸರ್ವವ್ಯಾಪಕವಾದ ಕೀರ್ತಿಯನ್ನು ಪಡೆದಿದ್ದೀರಿ. ನೀವು ೧೯೩೦ರಲ್ಲಿ, "ಸಿವಿಲ್ ಡಿಸ್‌ಒಬೀಡಿಯನ್ಸ್" ಚಳವಳದಲ್ಲಿ ಇಂಡಿಯದ ಮಹಿಳೆಯರನ್ನು ಮುನ್ನಡೆಸಿದ್ದೀರಿ; ನೀವು ಆಗ ಸಂಪೂರ್ಣವಾದ ಕಷ್ಟಪರಂಪರೆಗಳನ್ನು ಅನುಭವಿಸಿದವರಾಗಿದ್ದೀರಿ. ಅನಂತರ ಸ್ವರಾಜ್ಯದ ಸಂಬಂಧದ ಯಾವತ್ತು ಚಳವಳಗಳ ಪ್ರತಿಯೊಂದು ಕರೆಯನ್ನೂ ಮನ್ನಿಸಿದವರಾಗಿದ್ದೀರಿ. ಜಗತ್ತಿನ ಇತರ ಜನಾಂಗಗಳಿಗೂ ನೀವು, ಇಂಡಿಯದ ಜನಾಂಗದ ಉದ್ದೇಶಗಳು ಏನೆಂಬುದನ್ನು ತಿಳಿಯಪಡಿಸಿದ್ದೀರಿ. ಸಮುದ್ರಪ್ರಯಾಣವು ಅಪಾಯಕಾರಿಯಾಗಿದ್ದಾಗಲೂ—ಸಬ್‌ಮೆರೈನ್ ಮತ್ತು ವಿಮಾನಗಳ ಹಾವಳಿಯಿಂದ—ನೀವು ಬೆದರದೆ, ಅಮೆರಿಕಕ್ಕೆ ತೆರಳಿ, ಅಲ್ಲಿ "ಇಂಡಿಯವು ತೃಪ್ತವಾಗಿದೆ" ಎಂದು ಆಸಕ್ತಿಯುಳ್ಳವರು ಮಾಡಿದ ಪ್ರಚಾರಕಾರ್ಯಕ್ಕೆ ವಿರೋಧವಾಗಿ, ಪರಿಣಾಮಕಾರಿಯಾದ ಕಾರ್ಯಗಳನ್ನೇ ನಡೆಸಿದಿರಿ. ನೀವು ಬ್ರಿಟಿಷ್ ಮಂತ್ರಿಮಂಡಲದ ತರಗತಿಯ ಬ್ರಿಟಿಶ್ ರಾಜನೀತಿಜ್ಞರನ್ನು ಟೀಕಿಸುವ ಮಟ್ಟಕ್ಕೂ ಏರಿದಿರಿ. ಅಮೆರಿಕದವರ ಅಭಿವ್ಯಾಯದ ವರ್ಚಸ್ಸಿನಿಂದ ಇಂಡಿಯಕ್ಕೆಲ್ಲಿಯಾದರೂ ಬೇಗನೇ ಸ್ವರಾಜ್ಯವು ದೊರಕಿದರೆ—ಅಮೆರಿಕದ ಜನರಿಗೆ ಇಂಡಿಯದ ವಿಚಾರದಲ್ಲಿ ಶಿಕ್ಷಣ ಕೊಡಲು ಯತ್ನಿಸಿದ—ನಿಮಗೆ, ಅದರಲ್ಲಿ ತಕ್ಕಷ್ಟು ಕೀರ್ತಿಲಾಭದ ಪಾಲು ಉಂಟೇ ಉಂಟು.

ನೀವು ಮಾತೃಭೂಮಿಯ ಸೇವೆಯಲ್ಲಿ ಯಾವ ಯತ್ನವನ್ನೂ, ಯಾವ ತ್ಯಾಗವನ್ನೂ ಮಾಡದೆ ಬಿಟ್ಟಿಲ್ಲ. ದೇವರು ನಿಮಗೆ ಈ ದೇಶಸೇವೆಯನ್ನು ಅಧಿಕ ಶಕ್ತಿಯಿಂದ ಮಾಡಲು ಆಯುರಾರೋಗ್ಯ, ಸುಖ ಸಂತೋಷಗಳನಿತ್ತು ಆಶೀರ್ವದಿಸಲಿ!

ಶ್ರೀಮತಿ ಕಮಲಾ ದೇವಿಯವರ ಉತ್ತರ

ಶ್ರೀಮತಿ ಕಮಲಾ ದೇವಿಯವರು, ಈ ಮುನಿಸಿಪಾಲಿಟಿ ತಮಗಿತ್ತ ಈ ಗೌರವಕ್ಕಾಗಿ ವಂದಿಸುತ್ತ, "ಈ ಮುನಿಸಿಪಾಲಿಟಿ ತನ್ನ ನಾಗರಿಕರಲ್ಲಿ ಸಮರ್ಪಿಸಿದ ಮಾನಪತ್ರಗಳಲ್ಲಿ ಇದೇ ಮೊದಲನೆಯದು" ಎಂಬುದಾಗಿ ಸಂತೋಷಿಸಿ, ಈ ಮುನಿಸಿಪಾಲಿಟಿಯ ಪೌರ ಕಾರ್ಯಗಳ ಪ್ರಶಂಸೆ ಮಾಡಿದರು. ಬಳಿಕ ತಾವು ಪ್ರವಾಸ ಬೆಳಿಸಿದ ಯುರೋಪಿನ ಮತ್ತು ಇತರ ವಿದೇಶೀ ನಗರಗಳ ಮುನಿಸಿಪಾಲಿಟಿಗಳ ವಿಷಯಗಳನ್ನು ಎತ್ತಿಕೊಂಡು, ಅವನ್ನು ಹೋಲಿಸುವಲ್ಲಿ, ಇಂಡಿಯದ ನಗರಗಳಲ್ಲಿನ ಮುನಿಸಿಪಾಲಿಟಿಗಳ ಪೌರ ಹಿತಕಾರ್ಯಗಳ ಸಾಧನೆ ಸಾಲದೆಂದರು. ಇತರ ದೇಶಗಳ ಪೌರಕಾರ್ಯಗಳಲ್ಲಿ, ಅಲ್ಲಿನ ಮುನ್ಸಿಪಲ್ ಕಾರ್ಪರೇಶನುಗಳು ಹೇಗೆ ಶಾಲೆಗಳ ಮಕ್ಕಳಲ್ಲಿ "ಉತ್ಪತ್ತಿ"ಯ ಬುದ್ಧಿಯನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ ಎಂದು ನಿರ್ದೇಶಿಸುತ್ತ, ಗಾಂಧಿಜಿಯವರ "ಬೇಜಿಕ್" ವಿದ್ಯಾ ಪದ್ಧತಿಯು, ಈ ಸಂದರ್ಭದಲ್ಲಿ ಎಷ್ಟು ಮಟ್ಟಿಗೆ ಎಹಿತವಾಗಿದೆ ಎಂದು ಸೂಚಿಸಿದರು. ಅಲ್ಲಿ ಹಲವು ಮುನಿಸಿಪಾಲಿಟಿಗಳು ಸಾಮಾಜಿಕ ಮತ್ತು ಕಲಾವೃದ್ಧಿಯ ಕೇಂದ್ರಗಳಾಗಿವೆ ಎಂದು, ಸುಮಾರು ಮಂಗಳೂರಷ್ಟೇ ದೊಡ್ಡದಾದ ಸ್ವಾಕ್‌ಹೋಮ್ ಮುನಿಸಿಪಾಲಿಟಿಯ ಕುರಿತು ಮಾತಾಡುತ್ತ, ಅದು ಬಹು ನಿರ್ಮಲವಾಗಿದೆ ಎಂದೂ, ಅಲ್ಲಿ ಕೊಳಕು ಗುಡಿಸಲುಗಳಿಲ್ಲವೆಂದೂ, ಅಲ್ಲಿನ ಮಂದಿರ ನಿರ್ಮಾಣದ ರಚನೆಯ ಯೋಜನೆ ಬಹು ಶ್ರೇಷ್ಠವಾದುದೆಂದೂ, ಅಲ್ಲಿ ಆ ಮುನಿಸಿಪಾಲಿಟಿಯ ಸ್ವಂತ ನಾಟಕ ಮಂದಿರಗಳೇ ಇದ್ದು, ಅವುಗಳಲ್ಲಿ ಪ್ರಸಿದ್ಧ ನರ್ತಕರ, ನಟರ, ಸಂಗೀತಗಾರರ ಪ್ರಯೋಗಗಳಿಂದ ಕಲಾವೃದ್ಧಿಗೆ ಬಹಳ ಸಹಾಯವಾಗುತ್ತಿರುವುದೆಂದೂ ನುಡಿದರು. ಅಮೆರಿಕದ ರೇಡಿಯೋ ಕ್ರಮ ಚೆನ್ನಾಗಿದ್ದು, ಅದರಲ್ಲಿ ಪ್ರಯಾಣಿಕರು, ಪ್ರವಾಸಿಗಳು ನೋಡತಕ್ಕ ಸ್ಥಳ, ವಸ್ತುಗಳ ಶ್ರವಣವು ಬಹು ಸಹಕಾರಿ ಎಂದೂ, ಮುನಿಸಿಪಾಲಿಟಿಗಳು ಭೂರಿಜನ ಸಮುದಾಯ ಚಟುವಟಿಕೆಗಳಿಗೂ, ಅಂಗಸಾಧನೆಯ ಕಾರ್ಯಗಳಿಗೂ ಅವು ಹೇಗೆ ಪ್ರೋತ್ಸಾಹ ಕೊಡುತ್ತಿವೆ ಎಂದೂ ವಿವರಿಸಿದರು. ಚೀನದಲ್ಲಿ ಭೂರಿಜನರ "ಡ್ರಿಲ್"ಗೆ ಅಲ್ಲಿನ ಮುನಿಸಿಪಾಲಿಟಿಗಳೇ ಕಾರಣವೆಂದರು. ಒಟ್ಟಿನಲ್ಲಿ ಮುನಿಸಿಪಾಲಿಟಿಗಳು ರಸ್ತೆ ದೀಪಗಳ ವಿಚಾರದಲ್ಲಷ್ಟೇ ಶ್ರದ್ಧೆ ವಹಿಸದೆ, ನಾಗರಿಕರ ಎಲ್ಲ ಸುಖ ಸೌಕರ್ಯಗಳ ಕಡೆಗೂ ಲಕ್ಷ್ಯ ಹರಿಯಿಸಿ, ಅವರ ಸಾಮಾಜಿಕವೇ ಮೊದಲಾದ ವಿಚಾರಗಳ ಅಭಿವೃದ್ಧಿಗೆ ಸಾಧಕವಾಗಬೇಕೆಂದೂ, ಮಕ್ಕಳ ಜೀವನವನ್ನು ತಿದ್ದಬೇಕೆಂದೂ ಆಡಿದರು. ಇಂಡಿಯದ ನಾಗರಿಕತನ ಎಂದಾದರೂ ಕೆಡದು, ಅದು ಏನಾದರೂ ಬಾಳುವುದು ಎಂಬುದರಿಂದ, ನಮ್ಮ ಮುನಿಸಿಪಾಲಿಟಿಗಳ ಮುಂದಿನ ಕರ್ತವ್ಯದ ಸಾಧನೆಯಿಂದ ನಮಗೆ ಮಾತ್ರವೇ ಅಲ್ಲ, ಜಗತ್ತಿನ ಭವಿಷ್ಯಕ್ಕೂ ಸಹಾಯವಾಗುವಂತಿರಬೇಕು ಎಂದು ನಮ್ಮ ಮುನ್ಸಿಪಾಲಿಟಿಯ ಶ್ರೇಯಸ್ಸನ್ನೂ ಕೋರಿ ಅವರಿಂದ ಉತ್ತಮ ಪೌರ ಕಾರ್ಯಗಳನ್ನು ಆರೈಸಿದರು.

ನನ್ನ ಮತ್ತು ನಿಮ್ಮ ಸುರಕ್ಷಿತೆಗಾಗಿ
ಒಂದು ವ್ಯವಹಾರ ವಿವೇಕಪೂರ್ಣ ಯೋಜನೆ
ಯುದ್ಧವ ದಿನದಿನಕ್ಕೆ ನಿಮಗೆ ಪ್ರಿಯರಾದ ವ್ಯಕ್ತಿಗಳ ಹತ್ತಿರಕ್ಕೆ ಬರುತ್ತಿದೆ. ಅದ್ದರಿಂದ ಅವರ ಜೀವನವನ್ನೂ, ನಿಮ್ಮ ಜೀವ ಅಸ್ತಿಪಾಸ್ತಿ, ಭವಿಷ್ಯದ ಹಿತಗಳನ್ನೂ ರಕ್ಷಿಸಿಕೊಳ್ಳಲು ನೀವು ಈಕ್ಷಣವೇ ನಿಮ್ಮ ಕೈಲಾದ ಕಾರ್ಯಕ್ರಮಗಳನ್ನೆಲ್ಲಾ ಕೈಗೊಳ್ಳ ಬೇಕಾದುದು ನ್ಯಾಯವೇ ಅಗಿದೆ. ಇಂಡಿಯಾವು ಪರಕೀಯರ ಧಾಳಿಯನ್ನು ಇದಿರಿಸಲು ಸಮರ್ಥವಾಗುವುದಕ್ಕೆ ನೀವು ಸಹಾಯಮಾಡಲು ಸಾಧ್ಯವಿದೆ. ನೀವು ಯಾವುದನ್ನು ಬೆಲೆಯುಳ್ಳದ್ದೆಂದು ಭಾವಿಸುವುದೋ ಅದನ್ನು ರಕ್ಷಿಸುವುದಕ್ಕೆ ಸಹಾಯ ಮಾಡುವುದು ನಿಮ್ಮಿಂದ ಸಾಧ್ಯ. ಆದರೆ ಕಾಲ ಕಳೆಯುವಂತಿಲ್ಲ. ಈ ಕ್ಷಣವೇ ಕಾರ್ಯೋನ್ಮುಖರಾಗಿರಿ!
ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು
ಇದಕ್ಕಾಗಿ ನಾವು ವಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನಾಕೆ, ವಿಮಾನದಳಗಳ ರಚನೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಹೆಚ್ಚಿಸುತ್ತದೆ
ಪ್ರತಿ ೧೦ ರೂಪಾಯನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ರೂ ೨-೯-೦ ಲಾಭ ಕೊಡುತ್ತೆ. ಹೆಚ್ಚಿನ ವಿವರಗಳು ಪೋಸ್ಟ್ ಆಫೀಸಿನಲ್ಲಿ ದೊರೆಯುತ್ತೆ.
GI-69-KN

ಬ್ಯಾಂಕಿನ ಮೂರು ಮುಖ್ಯ ಸೇವೆಗಳು

By: Sri. M. Mukund Kini.

ಜನಸಾಮಾನ್ಯಕ್ಕೂ ವ್ಯಾಪಾರಿ ವರ್ಗಕ್ಕೂ ಹಲವು ವಿಧಗಳಿಂದ ಸಲ್ಲಿಸುವ ಬ್ಯಾಂಕಿನ ಸೇವೆಯು ಅತೀ ಅಗತ್ಯವಾಗಿದೆ ಮತ್ತು ಆದರ್ಶವಾಗಿದೆ. ಇದರ ಸಹಾನವಾದ ಸೇವೆಯು ಜನತೆಗೆ ಬೇರೊಂದಿಲ್ಲ. ಬ್ಯಾಂಕಿನಲ್ಲಿ ಲೆಕ್ಕಾಚಾರ ವಹಿವಾಟುಗಳನ್ನು ನಡೆಸುವುದು, ಹಣ ವಾವತಿಯನ್ನು ಚಕ್ಕುಗಳ ಮುಖಾಂತರವೇ ಸಲ್ಲಿಸುವುದು ಮುಂತಾದವುಗಳಿಂದ ಸಿಗುವ ಪ್ರಯೋಜನಗಳು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಅವುಗಳನ್ನು ಇಲ್ಲಿ ವಿಸ್ತರಿಸುವುದಿಲ್ಲ. ಇತರ ಚಿಕ್ಕ ಚಿಕ್ಕ ಸೇವೆಗಳ—ಉದಾ: ಹಣದ ಸೌಂರಕ್ಷಣೆ ಯೋಜನೆ, ವಿಮಾ ಕಂತು, ತೆರಿಗೆ ಮೊದಲಾದುವುಗಳನ್ನು ಗಿರಾಕಿಗಳ ಪರವಾಗಿ ವಾವತಿ ಮಾಡುವುದು—ಕುರಿತು ಟಿಪ್ಪಣಿಯನ್ನು ಬರೆಯುವ ಅಗತ್ಯವೂ ಇಲ್ಲ. ಆದರೂ ವರ್ತಕರು ಬ್ಯಾಂಕಿನಿಂದ ಪಡೆಯಬಹುದಾದ ಸಾಲಗಳನ್ನು ಯಾವ ರೀತಿಯಲ್ಲಿ ಹೇಗೆ ಉಪಯೋಗಿಸಬಹುದು ಎಂಬುದನ್ನು ಸ್ವಲ್ಪ ವಿಸ್ತಾರವಾಗಿ ಹೇಳಬೇಕಾಗಿದೆ.

ಬ್ಯಾಂಕು ಸಾಲವನ್ನು ಕೊಡಲು ಅಪೇಕ್ಷಿಸುತ್ತದೆ

ಬ್ಯಾಂಕು ತನ್ನ ಗಿರಾಕಿಗಳಿಟ್ಟ ಠೇವಣಾತಿಗಳ ಮೇಲೆ ಹುಟ್ಟುವ ಬಡ್ಡಿಯನ್ನು ಕೊಡಬೇಕು. ಅಲ್ಲದೆ ಬ್ಯಾಂಕಿನ ಕಾರ್ಯಕ್ರಮಗಳನ್ನು ಸಾಂಗವಾಗಿ ನಡೆಯಿಸಲು ತಗಲುವ ಖರ್ಚನ್ನು ಕಳೆದ ಮೇಲೆ ಸ್ವಲ್ಪ ಲಾಭಾಂಶವನ್ನು ಉಳಿಸಬೇಕಾಗಿದೆ. ಬ್ಯಾಂಕಿನಿಂದ ಕೊಟ್ಟ ಸಾಲಗಳಲ್ಲಿ ಹುಟ್ಟಿ ಬರುವ ಬಡ್ಡಿಯೇ ಬ್ಯಾಂಕಿನ ಮುನಾಫೆಯ ಅರ್ಧಕ್ಕಿಂತಲೂ ಹೆಚ್ಚಾಗಿರುತ್ತದೆ. ಆದುದರಿಂದ ಬ್ಯಾಂಕು ತನ್ನಲ್ಲಿರುವ ಹಣವನ್ನು ಸಾಲವಾಗಿ ಕೊಡಲು ಅಪೇಕ್ಷಿಸುತ್ತದೆ. ಠೇವಣಾತಿ ಹಣವನ್ನು ಸಾಲವನ್ನಾಗಿ ಕೊಡುವುದರಿಂದ ಅದು ಸುರಕ್ಷಿತವಾಗಿರುವಂತೆಯೂ ಸುಲಭವಾಗಿ ಹಿಂದೆ ಪಡೆಯುವಂತೆಯೂ ಬ್ಯಾಂಕು ಜಾಗ್ರತೆ ತೆಗೆದುಕೊಳ್ಳಬೇಕು. ಕಾರಣ ಠೇವಣಾತಿದಾರರು ತಮ್ಮ ಹಣವನ್ನು ಯಾವ ಸಮಯದಲ್ಲಿ ಆಗಲೀ ಯಾ ನಿಶ್ಚಿತ ಸಮಯದ ಮೇಲಾಗಲೀ ಅಪೇಕ್ಷಿಸಿದಲ್ಲಿ ಅವರ ಹಣವನ್ನು ಪರತು ಕೊಡುವದೆ ತಯಾರಿರಬೇಕು.

ಭದ್ರತೆಯ ಸಾಲಗಳು ಯಾವಾಗಲೂ ಸುರಕ್ಷಿತ ದ್ರವರೂಪವಾಗಿರುತ್ತವೆ

ಸಾಲವನ್ನು ಕೊಡುವಾಗ ಸಾಲ ಪಡೆಯುವವನಿಂದ ತಕ್ಕಷ್ಟು ಭದ್ರತೆಯನ್ನು ಯೋಗ್ಯ ಜವಾಬ್ದಾರಿಯನ್ನು ಪಡಕೊಂಡ ಅಂತಹ ಸಾಲವು ಯಾವಾಗಲೂ ಸುರಕ್ಷಿತವಾಗಿರುತ್ತದೆ. ಇದರಿಂದ ಕೇವಲ ಬ್ಯಾಂಕಿಗೆ ಮಾತ್ರವಲ್ಲದೆ ಸಾಲಗಾರನಿಗೂ ಬಹಳ ಪ್ರಯೋಜನವಿದೆ. ಕಾರಣ ಇಂಥ ಸಾಲಗಳು ಯಾವಾಗಲೂ ಕಮ್ಮಿ ದರದ ಬಡ್ಡಿಯಲ್ಲಿ ಸಿಗುತ್ತವೆ. ಅಕ್ಕಿ ಬಂಗಾರ ಮೊದಲಾದುವುಗಳ ಮೇಲೆ ಸಿಕ್ಕುವ ಸಾಲಗಳು ಮೇಲಿನ ತರಗತಿಗೆ ಸೇರುತ್ತವೆ. ಯೋಗ್ಯ ಜವಾಬ್ದಾರಿ ಇಲ್ಲದ ಮತ್ತು ಮೈ ಸಾಲಗಳು ಯಾವಾಗಲೂ ಸುರಕ್ಷಿತವು ಅಲ್ಲ. ಮಾತ್ರವಲ್ಲದೆ ಅದರ ಬಡ್ಡಿಯ ದರವು ಮೇಲೆ ಹೇಳಿದ ಸಾಲದ ದರಕ್ಕಿಂತ ಎರಡು ಸಾಲು ಹೆಚ್ಚಾಗಿರುವುದು. ಹಿಂದೂದೇಶದಲ್ಲಿ ಜೀನಸು, ಚಿನ್ನಾಭರಣ, ದವಸಧಾನ್ಯಗಳ ಈಡಿನ ಮೇಲೆ ಕೊಡುವ ಸಾಲಗಳು ಸರ್ವಸಾಮಾನ್ಯವಾಗಿ ಹೆಚ್ಚಿಗೆ ಬಳಕೆಯಲ್ಲಿರುತ್ತವೆ.

ಭಂಗಾರದ ಅಡವಿನ ಸಾಲ

ಸರಿಯಾಗಿ ನೋಡುವುದಾದರೆ ಭಂಗಾರದ ಅಡವಿನ ಮೇಲೆ ಸಾಲ ಕೊಡುವುದರಿಂದ ಬ್ಯಾಂಕಿಗೆ ಅಷ್ಟು ಪ್ರಯೋಜನವಿಲ್ಲ. ಆದರೂ, ಹಿಂದೂ ದೇಶದಲ್ಲಿ ಸರ್ವಸಾಧಾರಣವಾಗಿ ಚಿನ್ನವನ್ನೇ ಅಡವಿಟ್ಟು ಸಾಲವನ್ನು ಪಡೆಯುವುದು ರೂಢಿಯಲ್ಲಿರುವುದರಿಂದ ಜನರ ಅನುಕೂಲತೆಯ ಕಡೆಗೆ ತನ್ನ ದೃಷ್ಟಿಯನ್ನಿಡುವುದು ಬ್ಯಾಂಕಿನ ಕರ್ತವ್ಯವಾಗಿದೆ. ವಿಮರ್ಶಿಸಿ ನೋಡುವಲ್ಲಿ ನಮ್ಮಲ್ಲಿ ಕೇವಲ ಕಡಿಮೆ ಜನರ ಹತ್ತಿರ ಇತರ ಸಂಸ್ಥೆಗಳ ಷೇರು ವಗೈರೆಗಳು ಇರುವುದರಿಂದ ಇವುಗಳ ಆಧಾರದ ಮೇಲೆ ಸಾಲಗಳನ್ನು ಪಡೆಯುವುದು ಕಮ್ಮಿ. ಹೀಗಾಗಿ ಭಂಗಾರದ ಈಡಿನ ಮೇಲೆ ಸಾಲ ಕೊಡುವುದು ನಮ್ಮ ದೇಶದಲ್ಲಿ, ಬ್ಯಾಂಕಿನ ಪ್ರಧಾನ ಕಾರ್ಯಕಲಾಪವಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿಯ ದೆಸೆಯಿಂದಾಗಿ ಪ್ರತಿಯೊಂದು ಸಾಮಾನು ವಸ್ತು ವಗೈರೆಗಳ ಬೆಲೆಗಳು ಹೆಚ್ಚು ಕಡಿಮೆಯಾಗುತ್ತಾ ಹೋಗುವ ಈ ಸಮಯದಲ್ಲಿ ಭಂಗಾರದ ಧಾರಣೆ ಮಾತ್ರ ದಿನೇ ದಿನೇ ಹೆಚ್ಚಾಗಿ ಹೋಗುವುದರಿಂದ ಭಂಗಾರದ ಅಡವಿನ ಮೇಲೆ ಕೊಡುವ ಸಾಲಗಳಿಂದ ಬ್ಯಾಂಕಿಗೆ ಭದ್ರತೆಯು ಇನ್ನಷ್ಟು ಹೆಚ್ಚುವುದು.

ದವಸಧಾನ್ಯಗಳ ಅಡವಿನ ಸಾಲಗಳು

ವರ್ತಕ ವರ್ಗಕ್ಕೆ ದವಸಧಾನ್ಯ, ಜೀನಸು ಮೊದಲಾದವುಗಳ ಈಡಿನ ಮೇಲೆ ಕೊಡುವ ಸಾಲವು ಬಹಳ ಪ್ರಾಮುಖ್ಯವಾದುದು. ಈ ತರದ ಸಾಲವು ಈಗ ಇಡೀ ಜಗತ್ತಿನಲ್ಲಿ ಪ್ರಸಿದ್ಧವಾಗಿರುತ್ತದೆ. ಒಂದು ಸಮಯದಲ್ಲಿ ದಕ್ಷಿಣ ಹಿಂದೂದೇಶದ ವರ್ತಕರು ತಮ್ಮದೇ ಆಗಿರುವ ಭಂಡವಾಳದಿಂದ ವಹಿವಾಟು ನಡೆಸಬೇಕೆಂಬ ಭಾವನೆಯಿದ್ದುದರಿಂದ ಈ ಸಾಲಗಳು ಅಷ್ಟು ಬಳಕೆಯಲ್ಲಿರಲಿಲ್ಲ. ಒಂದು ಯೋಗ್ಯ ಬ್ಯಾಂಕಿನ ಸಲಹೆಗಳ ಮೇರೆಗೆ ಕ್ರಮವಾದ ಮಿತಿಯಿಂದ ವ್ಯವಹಾರಕ್ಕೆ ಬೇಕಾದ ಭಂಡವಾಳವನ್ನು ಹೆಚ್ಚಿಸುವುದರಲ್ಲಿ ವ್ಯಾಪಾರದ ರಹಸ್ಯವು ಅಡಗಿರುತ್ತದೆ. ಇಂತಹ ಭಯಂಕರ ಮುಗ್ಗಾಟದ ದಿನಗಳಲ್ಲಿ ವ್ಯಾಪಾರದಲ್ಲಿ ಸಿಕ್ಕುವ ಲಾಭವು ಬಹಳ ಕಡಿಮೆಯಾಗಿರುವುದರಿಂದ ವ್ಯಾಪಾರದ ಮಗಚಾಟವನ್ನು ಹೆಚ್ಚು ಹೆಚ್ಚು ಮಾಡಿದ ಹಾಗೆ ಲಾಭಾಂಶವೂ ಹೆಚ್ಚುವುದು. ಸಾಮಾನು ವಗೈರೆಗಳನ್ನು ಪಡೆದು ಬ್ಯಾಂಕಿನಲ್ಲಿ ಅಡವಿಟ್ಟು ಪಡೆದುಕೊಳ್ಳುವ ಸಾಲವು ನಮ್ಮ ಒಂದು ಭಂಡವಾಳದ ಹಾಗೆ ಆಗುತ್ತದೆ. ಇದರಿಂದ ಅಗ್ಗ ದರದಲ್ಲಿ ಸಾಮಾನನ್ನು ಪಡಕೊಂಡು ಸಾವಕಾಶದಿಂದ ಬೆಲೆ ಏರುವ ಸಮಯದಲ್ಲಿ ಮಾರಲು ಬಹಳ ಅನುಕೂಲವಾಗುತ್ತದೆ.

(೬ನೇ ಪುಟಕ್ಕೆ ಮುಂದುವರಿಸಿಯದೆ)



"ಈ ದಿವಸ ನಿಮ್ಮ ಹಲ್ಲುಗಳನ್ನು
ಮ್ಯಾಕ್‌ಲೀನ್
ಮಾಡಿದಿರೋ?"



"ಆಹಾ! ಹಲ್ಲುಗಳನ್ನು ಅಲಕ್ಷ್ಯವ್ಯಾಡಬಾರದೆಂದು ನಿಮಗೆ ತಿಳಿದಿದೆ."

ನಿಮ್ಮ ಹಲ್ಲುಗಳನ್ನು ಅಲಕ್ಷ್ಯ ಮಾಡಬೇಡಿ. ಮ್ಯಾಕ್‌ಲೀನ್ ಟೂತ್‌ಪೇಸ್ಟಿನ ಸಹಾಯದಿಂದ ಅವುಗಳನ್ನು ಬೆಳ್ಳಗೂ, ಥಳಥಳನೆಯೂ, ಆರೋಗ್ಯಯುತವಾಗಿಯೂ ಇಟ್ಟುಕೊಳ್ಳಿ. ಮ್ಯಾಕ್‌ಲೀನಿನ ದೊಡ್ಡ ಟ್ಯೂಬು ವಿತವ್ಯಯವಾಗಿರುವುದು ಮತ್ತು ಅದರ ಪರಿಮಳವು ನಿಮಗೆ ಆನಂದವನ್ನುಂಟುಮಾಡುವುದು.



ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಸ್ಟೋರ್‌ಗಳಲ್ಲಿಯೂ ಸಿಗುತ್ತೆ.

ಕೆಮ್ಮು, ನೆಗಡಿ ಮತ್ತು ಶ್ವಾಸಕೋಶದ ಬಾಧೆಗಳನ್ನು ಕ್ರಮವಾಗಿ ಪೆಪ್ಸ್ ಸೇವಿಸಿ ಗುಣಪಡಿಸಿಕೊಳ್ಳಿ

ದೀರ್ಘಕಾಲದ ಕೆಮ್ಮು, ಶ್ವಾಸ ಖಾಸ ಇಲ್ಲವೆ ಶ್ವಾಸ ಕೋಶದ ಬಾಧೆಗಳು ನಿಮ್ಮ ಸಂತಸವನ್ನು ಕಸಿಯದಿರಲಿ. ಕೆಲವೇ ವಿಷಹಾರಕ ಶ್ವಾಸನೀಯ ಪೆಪ್ಸ್ ಬಿಲ್ಲೆಗಳನ್ನು ಸದಾ ಜತೆಯಲ್ಲಿರಿಸಿಕೊಂಡು ಬೇಕಾದಾಗ ಸೇವಿಸುತ್ತಲಿರಿ.

ಪೆಪ್ಸ್ ನಿಮ್ಮ ಬಾಯಲ್ಲಿ ಕರಗಿ, ಅಮೂಲ್ಯ ಔಷಧೀಯ ಸಾರಗಳನ್ನು ಹೊರಸೂಸುತ್ತದ್ದು ಇವು ನಿಮ್ಮ ಶ್ವಾಸದೊಂದಿಗೆ ಪುಪ್ಪುಸಗಳೊಳಗೆ ಆಳಕ್ಕೆ ಸೇರಿಕೊಳ್ಳುತ್ತವೆ. ಹಾಗೆ, ಪೆಪ್ಸ್, ಕೆಮ್ಮಲಿನಿಂದ ಉರಿಗೊಂಡ ಶ್ವಾಸನಾಳಗಳ ತೆಳು ಪರೆಗಳನ್ನು ವಾಸಿಮಾಡುತ್ತದೆ. ಗಂಟಲ ಬೇನೆಯನ್ನು ಶಮನಗೊಳಿಸಿ, ಕಫ ಶ್ವಾಸವನ್ನು ನಿವಾರಿಸಿ, ಅಸಹ್ಯ ನೆಗಡಿ, ಫ್ಲೂ, ಯಾವತ್ತೂ ತೀವ್ರ ಕೆಮ್ಮಲಿಗೆ ಆದರ್ಶ ಚಿಕಿತ್ಸೆಯಾಗಿದೆ.



ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್‌ನ್ನು ಒಂದು ರೂಪಾಯಿಯಂತೆ ಬಿಕರಿಮಾಡುತ್ತಾರೆ. ಏಜೆಂಟರು:—
ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್, ಮದ್ರಾಸು.

ಪೆಪ್ಸ್ ಸೇವಿಸಿ
PEPS
ವಿಷಹಾರಕ ಶ್ವಾಸನೀಯ ಬಿಲ್ಲೆಗಳು

ಬ್ಯಾಂಕಿನ ಮೂರು ಮುಖ್ಯ ಸೇವೆಗಳು

(೫ನೇ ಪುಟದಿಂದ ಮುಂದುವರಿದುದು)

ಹುಂಡಿಗಳು

ವ್ಯಾಪಾರಿಗಳು ತಮ್ಮ ಸಾಮಾನನ್ನು ಒಬ್ಬರಿಗೊಬ್ಬರು ಮಾರಿ, ಪರಸ್ಪರ ಹುಂಡಿಗಳನ್ನು ಬ್ಯಾಂಕಿನಲ್ಲಿ ವಟ್ಟಾಯಿಸಿ ಹಣ ಪಡೆಯುತ್ತಾರೆ. ಇದೊಂದು ತರದ ಬ್ಯಾಂಕಿನಿಂದ ಕೊಡುವ ಸಾಲವು. ಅಷ್ಟೊಂದು ಭದ್ರತೆಯಿಲ್ಲ–ಆದರೆ ವ್ಯಾಪಾರಿಗಳಿಗೆ ಬಹಳ ಅನುಕೂಲ ಮತ್ತು ಅತೀ ಅಗತ್ಯ. ಹುಂಡಿಯ ಅವಧಿಯು ಮುಗಿಯುವುದರೊಳಗೆ, ವ್ಯಾಪಾರಿಗಳು ತಮ್ಮಲ್ಲಿರುವ ಮಾಲನ್ನು ಸಾವಕಾಶದಿಂದ ಮಾರಿ ಹಣವನ್ನು ಜಮಾಯಿಸಿ ಹುಂಡಿಯ ಹಣವನ್ನು ಪರತು ಬ್ಯಾಂಕಿಗೆ ಪಾವತಿ ಮಾಡಲು ಇದರಿಂದ ಬಹಳ ಅನುಕೂಲ. ಅಲ್ಲದೆ ವ್ಯಾಪಾರಸ್ಥರ ಹಿತದೃಷ್ಟಿಯಿಂದ ಈ ಹುಂಡಿಗಳ ಉಪಯೋಗವು ಅಗತ್ಯವಾಗಿದೆ. ಉದಾಹರಣೆಗಾಗಿ ಒಬ್ಬ ರಖಂ ವ್ಯಾಪಾರಿಯು ಇನ್ನೊಬ್ಬ ಚಿಲ್ಲರೆ ವ್ಯಾಪಾರಿಗೆ ತನ್ನಲ್ಲಿರುವ ಸಾಮಾನನ್ನು ಮಾರಿ, ಅದರ ಬೆಲೆಯನ್ನು ಲೆಕ್ಕದ ಪುಸ್ತಕದಲ್ಲಿ ಖರ್ಚು ಬರೆದಿಟ್ಟರೆ ಚಿಲ್ಲರೆ ವ್ಯಾಪಾರಿಯು ಆತನ ಅನುಕೂಲತೆಯ ಮೇರೆಗೆ ಹಣ ಪಾವತಿಮಾಡುವ ವರೆಗೆ ಕಾಯಬೇಕಾಗುತ್ತದೆ. ಅಂತಹ ಪಾವತಿಗೆ ದೀರ್ಘ ಸಮಯ ಹೋಗಬಹುದು. ಇದರಿಂದ ರಖಂ ವ್ಯಾಪಾರಿಗೆ ಹಣದ ಅಡಚಣೆಯು ಹೆಚ್ಚುವುದು. ಬದಲಾಗಿ ರಖಂ ವ್ಯಾಪಾರಿಯು ಒಂದು ಹುಂಡಿಯನ್ನು ಚಿಲ್ಲರೆ ವ್ಯಾಪಾರಿಯ ಒಪ್ಪಿಗೆಯಿಂದ ನಿಶ್ಚಿತ ಸಮಯದ ಮೇಲೆ ಇಂತಿಷ್ಟು ಹಣವನ್ನು ಕೊಡುತ್ತೇನೆಂಬ ಶರ್ತಗಳಿಂದ ಬರಾಯಿಸಿದರೆ ತನಗೆ ಅಗತ್ಯವಿದ್ದಾಗ ಆ ರಖಂ ವ್ಯಾಪಾರಿಯು ಸದರಿ ಹುಂಡಿಯನ್ನು ಬ್ಯಾಂಕಿನಲ್ಲಿ ವಟ್ಟಾಯಿಸಿ ಹಣವನ್ನು ಪಡೆಯಬಹುದು. ಇಂಥ ಹುಂಡಿ ವಹಿವಾಟ್ಟುಗಳು ಅಮೇರಿಕಾ. ಇಂಗ್ಲಾಂಡು ದೇಶಗಳಲ್ಲಿ ಬಹಳವಾಗಿ ಪ್ರಸಿದ್ಧವಾಗಿರುವುದಲ್ಲದೆ, ಬ್ಯಾಂಕಿನ ಮುಖ್ಯ ಕಾರ್ಯಕಲಾಪವೂ ಆಗಿರುತ್ತದೆ.

ಕೆನರಾ ಬ್ಯಾಂಕು ಬಡ್ಡಿಯ ದರಗಳನ್ನು ವಿಶೇಷವಾಗಿ ತಗ್ಗಿಸಿ ಹುಂಡಿ ಮಹಿವಾಟು ದವಸಧಾನ್ಯಗಳ ಅಡವಿನ ಸಾಲಗಳ ಉಪಯೋಗವು ಎಲ್ಲರಿಗೂ ದೊರಕಲೆಂದು ಸದಾ ಪ್ರಯತ್ನಿಸುತ್ತದೆ.

NOTICE

In the Court of the District Judge of South Kanara, Mangalore.

O. P. No. 138/1941

(In the matter of the estate of late George Suvarna)

Lydia Suvarna and others— **Petitioners.**

and

Hosker Suvarna— **Respondent.**

Notice is hereby given to all persons interested in the estate of the above-named deceased. That the Petitioners above named have made the above petition for the grant of Letters of Administration to the 1st Petitioner, in respect of the properties of the said deceased, who died at Jalsur Estate Balehonnur Post; and whose residence at the time of his death was at Kadri, Mangalore Town; and the said Petition is posted to 2—2—1942 for final disposal.

Persons desirous of opposing the said petition may appear either in person, or through Lawyers, on the said date, at 10—30 A. M. and file their objections if any, failing which the petition will be proceeded with exparte.

(By Order)

M. Gopalakrishna,

Advocate for Petitioners.

Mangalore, Dated 3rd Jan. '42

ಬೇಡರಿ

ಆ ವಾಚನ್ನು ದೂರ ಬಿಸಾಡ ಬೇಡರಿ!

ಯಾವ ತಯಾರಿಯದೇ ಆಗಿರಲಿ, ನಿಮ್ಮಕೂಡೆ ಇದ್ದ ವಾಚ್ ಹಾಳಾಗಿದ್ದರೆ, ಇಲ್ಲವೇ ಅದಮಾಸಕರ ಕೆಲಸ ಮಾಡುವುದಾದರೆ,—ಅದನ್ನು ದೂರ ಬಿಸಾಡ ಬೇಡರಿ! ಫೇವರ್–ಲ್ಯೂಬದ ರಿಪೇರಿ ಇಲಾಖೆಯ ಸ್ಪಿಸ್ ವಿಜಕ್ಷಣರ ವಿಶಿಷ್ಟ ಕಾಮುಗಾರಿಯಿಂದ ಅದು ಪುನಃ ಸರಿ ಕೆಲಸಗೊಡುವಂತೆ ಮಾಡ ಬಹುದು.

ಫೇವರ್–ಲ್ಯೂಬಾದ ಶೋ ರೂಂ ಇರುವ ಪಟ್ಟಣದಲ್ಲಿ ನೀವು ವಾಸಿಸುವಿರಾದರೆ, ರಿಪೇರಿಗೆ ಅಲ್ಲಿಯೆ ಕೊಡಿರಿ. ನೀವು ಪರಸ್ಥಳದಲ್ಲಿರುವಿರಾದರೆ, ನಿಮ್ಮ ಹತ್ತಿರದ ಡಿಪೊಎಗೆ ಟಪ್ಪಾಲು ದ್ವಾರಾ ಕಳುಹಿಸಿರಿ.

FAVRE-LEUBA

AND COMPANY LIMITED.

REPAIRS DEPARTMENT

BOMBAY—CALCUTTA—RANGOON

ಒಂದು ಸತ್ಕಾರ ಕೂಟ— ಮಂಗಳೂರು

ಕೆನರಾ ಚೇಂಬರ್ ಒಫ್ ಕಾಮರ್ಸಿನ ವರ್ಧಂತ್ಯುತ್ಸವ ಸಮಾರಂಭದ ಸಮಯದಲ್ಲಿ ಯಶಸ್ವಿಯಾಗಿ ನಾಟಕ ಪ್ರಯೋಗ ಮಾಡಿದ ಪ್ರಭಾತ ಕಲಾ ಮಂಡಲದವರನ್ನು, ಶ್ರೀಯುತ ಮಣೇಲ ಶ್ರೀನಿವಾಸ ನಾಯ್ಕರು "ಸುಖ ನಿವಾಸ"ದಲ್ಲಿ ಈಚಿಗೆ ಭೋಜನ ಸತ್ಕಾರದಿಂದ ಸನ್ಮಾನಿಸಿದರು. ಈ ಸಮಾರಂಭಕ್ಕೆ ಶ್ರೀ। ಎಮ್. ರಾಘವೇಂದ್ರ ಪೈ, ಶ್ರೀ। ಕುಂಬಳೆ ಅಣ್ಣಪ್ಪ ನಾಯ್ಕ, ಶ್ರೀ। ಮಣೇಲ ಅಣ್ಣಪ್ಪ ನಾಯ್ಕರೇ ಮೊದಲಾದವರು ಆಹ್ವಾನಿಸಲ್ಪಟ್ಟಿದ್ದರು. ಶ್ರೀ। ಶ್ರೀನಿವಾಸ ನಾಯ್ಕರು ಹಾಸ್ಯ ವಿನೋದಗಳ ಕುರಿತಾದ ವಿಚಾರಪೂರಿತವಾದ ತಮ್ಮ ಭಾಷಣದಲ್ಲಿ, ಕಲಾಭ್ಯಾಸಿಗಳನ್ನು ಅಂದು ಪ್ರಯೋಗಿಸಿದ ನಾಟಕದಲ್ಲಿ ವಹಿಸಿದ ಬೇರೆ ಬೇರೆ ಪಾತ್ರಗಳ ಹೆಸರಲ್ಲೇ ಸಂಬೋಧಿಸುತ್ತ, ಸ್ವಸ್ತಿವಾಚನ ಮಾಡಿದರು. ಇದಕ್ಕುತ್ತರವಾಗಿ (ಪ್ರಭಾತಕಲಾ ಮಂಡಲದ ಪರವಾಗಿ) ಶ್ರೀ। ಎಸ್. ಎನ್. ಹೊಳ್ಳರವರು, ಶ್ರೀ। ಮಣೇಲ ಅಣ್ಣಪ್ಪ ನಾಯ್ಕ, ಶ್ರೀ। ಶ್ರೀನಿವಾಸ ನಾಯ್ಕ ಮತ್ತು ಶ್ರೀ। ಎಮ್. ರಾಘವೇಂದ್ರ ಪೈ, ಇವರ ಕಾರ್ಯದಕ್ಷತೆ, ಕಲೆಯ ಕಡೆ ಇವರಿಗಿರುವ ಆಸಕ್ತಿ ಇವುಗಳನ್ನು ವಿವರಿಸಿ, ಭಾಷಣ ಮಾಡಿದರು. ಶ್ರೀ। ಎಮ್. ರಾಘವೇಂದ್ರ ಪೈಗಳವರು ನೆರೆದವರೆಲ್ಲರನ್ನೂ ಅಭಿವಂದಿಸಿದರು.

ಶ್ರೀ. ಸವರ್ಕಾರರ ಬಿಡುಗಡೆ

ಸಮಗ್ರ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಸವರ್ಕಾರರನ್ನು ಗಯಾ ಸೆಂಟ್ರಲ್ ಜೈಲಿನಿಂದ ಈಚಿಗೆ ಬಿಡುಗಡೆ ಮಾಡಿದರು. ಇವರು ೧೧ ದಿನ ಆ ಜೈಲಲ್ಲಿದ್ದರು. ಇವರೊಂದಿಗೆ ಡಾ. ಬಿ. ಎಸ್. ಮೂಂಜಿ, ಶ್ರೀ. ಎನ್. ಸಿ. ಚಾಟರ್ಜಿ, ಶ್ರೀ. ಪದ್ಮರಾಜ ಜೈನ್, ರಾಜಾ ಮಹೇಶ್ವರ ದಯಾಳಸೇಟ್, ಶ್ರೀ. ಆಶುತೋಷಲಹರಿ ಮೊದಲಾದವರನ್ನೂ, ಮತ್ತೆ ೪೦೦ ಮಂದಿ ಇತರ ಹಿಂದೂ ಮಹಾಸಭೆಯ ಕಲಸಗಾರರನ್ನೂ ಭಾಗಲ್ಪುರ ಸೆಂಟ್ರಲ್ ಜೈಲಿಂದಲೂ ೧೭೦ ಮಂದಿ ಹಿಂದೂ ಸಭಾ ಕಲಸಗಾರರನ್ನು ಪುಲ್ವಾರಿ ಕೇಂಪ್ ಜೈಲಿನಿಂದಲೂ ಬಿಟ್ಟರು. ಡಾ. ಪಿ. ವಿ ವರದರಾಜುಲು ನಾಯುಡುರವರೂ ಈಗ ಬಂಧಮುಕ್ತರಾಗಿದ್ದಾರೆ.

LIFE INSURANCE

Is the one investment which in peace or war knows no depreciation. It is the only scientific means which plans with prudence and certainty against the hazards of unknown tomorrow.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

Let "Popular", the successful and progressive life office of your own district, plan your future.

THE POPULAR INSURANCE CO., LTD.,

Head Office: **MANGALORE, S. I.**

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore.